ಪಾಸಿಟಿವ್ ಆಗಿ ತೆಗೆದುಕೊಂಡು, ಇದಕ್ಕೆ ಯಾವ ತರಹ ಪರಿಹಾರ ಕಂಡುಹಿಡಿಯಬೇಕೆಂಬುದನ್ನು ವಿಚಾರ ಮಾಡಬೇಕೇ ಹೊರತಾಗಿ, ಯಾವುದೇ ಒಂದು ವಿಚಾರವನ್ನು ಸಪ್ರೆಸ್ ಮಾಡಿದರೆ ಆ ವಿಚಾರಕ್ಕೆ ಇನ್ನೂ ಜಾಸ್ತಿ ಸ್ಫೂರ್ತಿ ಸಿಗುತ್ತದೆ. ಯಾವುದೇ ಸಪ್ರೆಸ್ ಮಾಡದೇ ಅವರ ಜೊತೆಗೆ ಸಮಾಲೋಚನೆ ಮಾಡಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಬೇಡಿಕೆಗಳನ್ನು ಇಟ್ಟುಕೊಂಡು, ಆ ಸಮಸ್ಯೆಗೆ ಪರಿಹಾರ ಕಂಡುಹಿಡಿದರೆ ಬಹುಶಃ ಈ ಸಮಸ್ಯೆಗೆ ಸಂಪೂರ್ಣವಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನಾನು ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ.

ನಿಯಮ 69ರ ಮೇಲೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ನಕ್ಸಲಿಯ ಚಟುವಟಿಕೆಗಳ ಬಗ್ಗೆ ನನಗನ್ನಿಸುತ್ತಿದೆ ಮೊಟ್ಟ ಮೊದಲನೆಯದಾಗಿ ಈ ನಮ್ಮ ಕರ್ನಾಟಕ ವಿಧಾನ ಸಭೆಯಲ್ಲಿ ಬಹಳ ವಿವರವಾದ ಚರ್ಚೆಯಾಗಿದೆ. ನಮ್ಮ ವಾಟಾಳ್ ನಾಗರಾಜ್‌ರವರು ಮತ್ತು ಈಶ್ವರಪ್ಪನವರು, ಮಾಧುಸ್ವಾಮಿಯವರು ಮತ್ತು ಬೇರೆಯವರೂ ಕೂಡ ಸದಸ್ಯರು ಏನು ಸದನದಲ್ಲಿದ್ದಾರೆ ಅವರುಗಳು ಈ ಒಂದು ವಿಷಯದ ಬಗ್ಗೆ ಹೆಚ್ಚು ಬೆಳಕು ಚೆಲ್ಲತಕ್ಕಂಥ ಒಂದು ಸಂದರ್ಭ ಬಂದಿದೆ. ಪ್ರಪ್ರಥಮವಾಗಿ ನಕ್ಸಲಿಯರ ಚಟುವಟಿಕೆಗಳ ಬಗ್ಗೆ ಪೂರ್ವಭಾವಿಯಾಗಿ ಏಕೆ ಇದು ಬೆಳೆಯುತ್ತಿದೆ ಎನ್ನತಕ್ಕಂಥ ರೀತಿಯಲ್ಲಿ ಕೂಡ ವಿಚಾರ ಮಾಡತಕ್ಕಂಥಾದ್ದು ಬಹಳ ಅತ್ಯಂತ ಗಂಭೀರವಾದ ವಿಷಯ. ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆ ಹೇಳಿದರು. ವಿಧಾನಸಭೆಯ ಹೊರಗಡೆ ಬಹಳ ಭಯದ ವಾತಾವರಣವಿದೆ, ಬಹಳ ಮಟ್ಟಿಗೆ ಒಂದು ಹೆದರಿಕೆ ಉಂಟಾಗಿದೆ ಇವತ್ತು ಸರ್ಕಾರ ಕೂಡ ಈ ಪೊಲೀಸ್ ಇಲಾಖೆ ವ್ಯವಸ್ಥೆ ನೋಡಿದರೆ ನಮಗೆ ಗೊತ್ತಾಗುತ್ತದೆ ಕಾನೂನು ವ್ಯವಸ್ಥೆ ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಕುಸಿದು ಹೋಗಿದೆ ಎಂದು. ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರಿಗೆ ಮತ್ತು ಇತರೇ ನಾಯಕರುಗಳಿಗೆ ಹೇಳಬಯಸುತ್ತಿದ್ದೇನೆ ಇವತ್ತು ಸರ್ಕಾರ ನಡೆಸತಕ್ಕಂಥ ವಿಶೇಷವಾಗಿ ಗೃಹ ಇಲಾಖೆ ಕೂಡ ನನಗೆ ಇದ್ದ ಕಾರಣ ಪ್ರತಿಯೊಬ್ಬ ಶಾಸಕರ ವಿಚಾರವಾಗಿ ಅವರ ಸಂರಕ್ಷಣೆ ಮಾಡುವುದು ನನ್ನ ಆದ್ಯ ಕರ್ತವ್ಯ. ಇತ್ತೀಚಿನ ದಿನಗಳಲ್ಲಿ ಇವತ್ತಿನ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಮಾನ್ಯ ಅಡ್ವಾನಿಯವರು ಈ ರಾಷ್ಟ್ರದ ಗೃಹ ಮಂತ್ರಿಗಳಾಗಿದ್ದರು, ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಈ ದೇಶದ ಪ್ರಧಾನ ಮಂತ್ರಿಗಳಾದಾಗ ಯಾವ ರೀತಿಯಾಗಿ ಉಗ್ರರು ಪಾರ್ಲಿಮೆಂಟ್ ಮೇಲೆ ಧಾಳಿ ಮಾಡಿದರು ಎನ್ನತಕ್ಕಂಥಾದ್ದು, ಶ್ರೀಮತಿ ಇಂದಿರಾಗಾಂಧೀಯವರು ಈ ದೇಶದ 14 ವರ್ಷಗಳ ಕಾಲ ಪ್ರಧಾನ ಮಂತ್ರಿಗಳಾಗಿ ಕೆಲಸ ಮಾಡಿದರು. ಅವರಿಗೆ ಕೂಡ 32 ಗುಂಡೇಟಿನಿಂದ ಯಾವ ರೀತಿಯಾಗಿ ಕೊಲೆಯಾಯಿತು, ಒಬ್ಬ ದೇಶದ ಮಾಜಿ ಪ್ರಧಾನಿ ಯುವ ನಾಯಕ ಈ ನಮ್ಮ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದಂತಹ ಶ್ರೀ ರಾಜೀವ್ ಗಾಂಧೀಯವರು ಈ ದೇಶದಲ್ಲಿ ಚುನಾವಣೆ ಪ್ರಚಾರಕ್ಕೆ ಹೊರಟಾಗ ಕೂಡ ಯಾವ ರೀತಿಯಾಗಿ ಹತ್ಯೆಯಾಯಿತು ಇವೆಲ್ಲಾ ಪ್ರಸಂಗಗಳು ಇತಿಹಾಸದ ಎಲ್ಲಾ ನಮಗೆ ನೆನಪು ಮಾಡುತ್ತವೆ. ಇವತ್ತು ಏನು ವಿಧಾನ ಸಭೆ ನಡೆಯುತ್ತಿದೆ ನಾವೆಲ್ಲರೂ ವಿಧಾನ ಸಭೆಯಲ್ಲಿ ಕುಳಿತಿದ್ದೇವೆ. ಕೇವಲ ಮುಖ್ಯಮಂತ್ರಿಗಳು ಮತ್ತೆ ವಿರೋಧಪಕ್ಷದ ನಾಯಕರು ಅಲ್ಲ. We are all the property of the entire state. ನಾವು ರಾಜ್ಯದ ಆಸ್ತಿಗಳಾಗಿದ್ದೇವೆ. ಈ ರಾಜ್ಯದ ಜನರಿಂದ ಆರಿಸಿ

ಜನತೆಯ ಸಮಸ್ಯೆಗಳನ್ನು ಪ್ರಾಮಾಣಿಕತೆಯಿಂದ ಬಗೆಹರಿಸತಕ್ಕಂಥ ರೀತಿಯಲ್ಲಿ ಇವತ್ತು ನಾವೆಲ್ಲರೂ ಕೂಡ ವಿಧಾನ ಸಭೆಯಲ್ಲಿ ನಾವಿದ್ದೇವೆ. ಇವತ್ತು ಸಂದರ್ಭ ಕರ್ನಾಟಕ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅದರ ಮುಖ್ಯಮಂತ್ರಿಯಾಗಿ ನಾನು ಕೆಲಸ ಮಾಡುತ್ತಿದ್ದೇನೆ. ಒಂದು ವೇಳೆ ಏನಾದರೂ ಕೂಡ ಘಟನೆ ನಡೆದಿದ್ದರೆ ಶಾಸಕರ ಭವನದಲ್ಲಿ ಮತ್ತು ಇಲ್ಲಿ ಸರ್ಕಾರ ಏನು ಮಾಡುತ್ತಿದೆ? ಗೃಹ ಇಲಾಖೆ ಏನು ಮಾಡುತ್ತಿದೆ? ಪೋಲೀಸ್ ಇಲಾಖೆ ಏನು ಮಾಡುತ್ತಿದೆ ಎನ್ನತಕ್ಕಂಥ ಶಬ್ದ ಭಯದ ವಾತಾವರಣದಲ್ಲಿ ಇಲ್ಲ. It is my duty. ಇದೆಲ್ಲಾ ಕಡೆಗೆ ಪಾರ್ಲಿಮೆಂಟ್‌ನಲ್ಲಿ ಘಾತಕ ಶಕ್ತಿಗಳು ಧಾಳಿ ಮಾಡಲು ಹೊರಟಾಗ ಇವತ್ತು ರಾಜ್ಯದಲ್ಲಿ ಕೂಡ ನಾವು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅದಕ್ಕೆ ನಾವು ವ್ಯವಸ್ಥಿತ ರೀತಿಯಲ್ಲಿ ಮಾಡಿದ್ದೇವೆ. ನಮಗೆ ಭಯದ ವಾತಾವರಣ ಇಲ್ಲ. ಮೊನ್ನೆ ಮಾನ್ಯ ಯಡಿಯೂರಪ್ಪನವರು ಅವರ ಸ್ನೇಹಿತರ ಜೊತೆಯಲ್ಲಿ ಮಂಗಳೂರಿಗೆ ಹೋಗಿದ್ದರು. ಈ ರಾಷ್ಟ್ರದ ಸ್ವಯಂ ಸೇವಕ ಸಂಚಾಲಕರಾದಂತಹ ಡಾಕ್ಟರ್ ಸುದರ್ಶನ್‌ರವರು ಇದ್ದರು. ಅಡ್ವಾನಿಯವರೂ ಕೂಡ ಬಂದು ಹೋಗಿದ್ದಾರೆ. ತಾವೆಲ್ಲರೂ ಕೂಡ ಇದ್ದೀರಿ ರಾಜ್ಯದ ಹಿರಿಯ ನಾಯಕರು. ಬಹಳ ಒಳ್ಳೆಯದಾಗಿ ವ್ಯವಸ್ಥಿತ ರೀತಿಯಲ್ಲಿ ಆ ಒಂದು ಸಮಾವೇಶ ನಡೆದಿದೆ. ಈಗ ರಾಜ್ಯದಲ್ಲಿ ಸುವ್ಯವಸ್ಥೆ ಹೇಗಿದೆ ಎಂದು ನಿಮಗೆ ಕೇಳಬೇಕೇ ಅಥವಾ ಡಾಕ್ಟರ್ ಸುದರ್ಶನ್‌ರವರಿಗೆ ಕೇಳಬೇಕೇ. ಅವರು ಹೇಳುತ್ತಾರೆ ಎಷ್ಟು ಒಳ್ಳೆಯ ರೀತಿಯಲ್ಲಿ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ ರಾಷ್ಟ್ರೀಯ ಸ್ವಯಂ ಸೇವಕದ ರಾಷ್ಟ್ರೀಯ ಸಮಾವೇಶ ಮಂಗಳೂರಿನಲ್ಲಿ ಎಂದು. ತಾವು ಅಲ್ಲಿನ ಶಾಸಕರಾಗಿದ್ದೀರಿ. ಎಲ್ಲಿ ಇವತ್ತು ನಕ್ಸಲೀಯ ಆಕ್ಟಿವಿಟೀಸ್ ನಡೆಯುತ್ತಿದೆ ಚಿಕ್ಕಮಗಳೂರು ಇದೆ, ಉಡುಪಿ ಇದೆ, ಮಂಗಳೂರು ಇದೆ, ಶಿವಮೊಗ್ಗ ಇದೆ. ಆ ಪ್ರಾಂತ್ಯದಲ್ಲಿ ಇವತ್ತು ಭಯದ ವಾತಾವರಣದಲ್ಲಿ ಒಂದು ಅಥವಾ ಎರಡು ಘಟನೆ ಚಿಕ್ಕಮಗಳೂರಿನಲ್ಲಿ ಮತ್ತು ಪಾವಗಡದಲ್ಲಿ ಆಗಿದೆ. ನೀವು ಬೇರೆ ವಿಚಾರದಲ್ಲಿ ಪ್ರಶಂಸೆ ಮಾಡಬೇಡಿ ಆದರೆ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ, ಪ್ರಜಾಪ್ರಭುತ್ವದಲ್ಲಿ ಎಷ್ಟೊಂದು ವ್ಯವಸ್ಥಿತ ರೀತಿಯಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ನಡೆಯತಕ್ಕಂಥ ರೀತಿಯಲ್ಲೂ ಕೂಡ ಅದು ಬರಬೇಕು ತಮ್ಮ ಬಾಯಿಂದ, ಆದರೆ ಮೂರು ದಿವಸಗಳ ಕಾಲ ನನ್ನ ಒಂದು ಅಭ್ಯಾಸ, ವಾಟಾಳ್ ನಾಗರಾಜ್‌ರವರಿಗೆ ಮತ್ತು ಬೇರೆ ಸ್ನೇಹಿತರಿಗೆ ಮುಂಜಾನೆ 6 ಗಂಟೆ ಮೇಲೆ ಎಲ್ಲಾ ಕಡೆ ಫೋನ್ ಮಾಡುವುದು ಇವತ್ತು ಮುರುಗನ್‌ಗೆ ಫೋನ್ ಮಾಡಿದೆ. ಆ ಮುರುಗನ್‌ಗೆ ಗೊತ್ತಾಗಲಿಲ್ಲ. ಕನ್ನಡ ಪ್ರಭಾದಲ್ಲಿ ರಾತ್ರಿ ಬಂದಿದೆ. Murgan you know what happened he said no,no,sir I have no .... ಅದಕ್ಕೆ ನಾನು ಈ ತರಹದ್ದು ಒಂದು ಅಭ್ಯಾಸದಿಂದ ಪ್ರತಿಯೊಂದು ಹಂತ ಹಂತದಲ್ಲಿ ವಿಚಾರಿಸುತ್ತಾ ಇರುತ್ತೇನೆ. ಇವತ್ತು ಯಡಿಯೂರಪ್ಪನವರು ಹೋಗುತ್ತಾರೆ, ಜಗದೀಶ ಶೆಟ್ಟರು ಹೋಗುತ್ತಾರೆ ಈಶ್ವರಪ್ಪನವರು ಹೋಗುತ್ತಾರೆ ಅಡ್ವಾನಿ ಬರುತ್ತಾರೆ ಯಾವ ರೀತಿಯಾಗಿ ಅಂತ ಹೇಳಿ ಪ್ರತಿಯೊಂದನ್ನೂ ನಾನು ಐ.ಜಿ. ಆಗಲಿ ಎಸ್, ಪಿ ಗೆ ಆಗಲಿ ಅವರ ಜೊತೆ ಸಮಾಲೋಚಿಸಿ ಕ್ರಮ ತೆಗೆದುಕೊಳ್ಳುತ್ತಾ ಇದ್ದೇನೆ. ಇವತ್ತು ಎಲ್ಲಾ ಕಡೆಗೆ ನೋಡಿದ್ದೇನೆ, ರಾಜ್ಯದ ಗೃಹ ಮಂತ್ರಿಯಾಗಿ ಶಿವರಾಸನ್ ಎಲ್ ಟಿ ಟಿ ಇ ಆಕ್ಟಿವಿಟೀಸ್‌ಗಳು ಇಡೀ ರಾಷ್ಟ್ರದಲ್ಲಿ ನಡೆಯತಕ್ಕಂಥ ಕಾಲದಲ್ಲಿ ಕರ್ನಾಟಕದಲ್ಲಿ ಕೋಣನಕುಂಟೆಯಲ್ಲಿ ಯಾವಾಗ ನಮ್ಮ ರಾಮಲಿಂಗಂ ಇದ್ದರು, ಆಗ ನಮ್ಮ ಪೋಲೀಸ್ ಇಲಾಖೆ ಎಲ್ಲಾ ಕಡೆ ಅಂಟಿಸಿಪೇಟ್ ಮಾಡತಕ್ಕಂಥಾದ್ದು, ಪೂರ್ವಭಾವಿಯಾಗಿ ವಿಚಾರ ಮಾಡತಕ್ಕಂಥಾದ್ದು ಮಾಡಿದ್ದೇವೆ. ರಾಜ್ಯದಲ್ಲಿ

ಪಂಚಾಯತ್ ಚುನಾವಣೆ ನಡೆಯಿತು, 85 ಸಾವಿರ ಪಂಚಾಯಿತಿ ಸದಸ್ಯರ ಚುನಾವಣೆ ರಾಜ್ಯದಲ್ಲಿ ನಡೆಯಿತು. ಎಲ್ಲಿಯಾದರೂ ಕೊಲೆಯಾಯಿತಾ? ಏನಾದರೂ ಫೈರಿಂಗ್ ಆಗಿದೆಯೇ? ಸಮ್ಮಿಶ್ರ ಸರ್ಕಾರ ಕರ್ನಾಟಕ ರಾಜ್ಯದಲ್ಲಿ 85 ಸಾವಿರ ಪಂಚಾಯಿತಿ ಸದಸ್ಯರ ಚುನಾವಣೆಯನ್ನು ಎಷ್ಟು ಯಶಸ್ವಿಯಾಗಿ ಮಾಡಿದೆ ಎಲ್ಲಿದೆ ಎಲ್ಲಿದೆ ಲಾ ಅಂಡ್ ಆರ್ಡರ್ ಹಾಗೂ ಹದಗೆಟ್ಟಿದೆ ಎನ್ನತಕ್ಕಂಥ ರೀತಿಯಲ್ಲಿ ತಾವು ಮಾತನಾಡಿದರೆ ಅದು ನಮಗೆ ಅಸಮಾಧಾನವಾಗುತ್ತದೆ. ಇವತ್ತು ಹತ್ತು ತಿಂಗಳ ಅವಧಿಯಲ್ಲಿ ಎಷ್ಟು ಗೋಲಿಬಾರ್ ಆಗಿದ್ದಿವೆ? ಶ್ರೀ ವಾಟಾಳ್ ನಾಗರಾಜ್‌ರವರೂ ಕೂಡ ಮೊದಲು ಸದಸ್ಯರಾಗಿದ್ದವರು, ಹಿರಿಯ ಸದಸ್ಯರಾಗಿದ್ದೀರಿ, ಹಿಂದಿದ್ದ ಮುಖ್ಯಮಂತ್ರಿಗಳ ಕಾಲದಲ್ಲಿ ಆದ ಶ್ರೀ ಎಂ ವಿ ರಾಮರಾವ್ ಕಾಲದಿಂದ ಹಿಡಿದುಕೊಂಡು, ಗುಂಡೂರಾವ್ ಕಾಲದವರೆಗೆ ಹಾಗೂ ಬೇರೆ ಬೇರೆ ಕಾಲದಲ್ಲಿ ಆಗಿದೆ, ಆದರೆ ನಮ್ಮ ಕಾಲದಲ್ಲಿ ಆಗಿಲ್ಲ ಅದಕ್ಕೆ ನಾನು ದೊಡ್ಡವನು ಎಂದು ಅಲ್ಲ. ಅದಕ್ಕೆ ನಾನು ಕಂಪೇರ್ ಮಾಡುತ್ತಿಲ್ಲ. 10 ತಿಂಗಳ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ, ಒಂದೂ ಪೋಲೀಸ್ ಫೈರಿಂಗ್ ಕರ್ನಾಟಕ ರಾಜ್ಯದಲ್ಲಿ ನಡೆದಿಲ್ಲ. ಇದು ಒಂದು ಐತಿಹಾಸಿಕವಾದಂತಹ ವ್ಯವಸ್ಥಿತ ರೀತಿಯಲ್ಲಿ ನಾವು ಸರ್ಕಾರ ನಡೆಸುತ್ತಿದ್ದೇವೆ. ಇವತ್ತು ಈ ಸಂದರ್ಭದಲ್ಲಿ ಬಹಳಷ್ಟು ಇವತ್ತು ಚಟುವಟಿಕೆ ಆಗುತ್ತಿದೆ. ಶ್ರೀ ಅಶೋಕ್‌ರವರು ಮಾತನಾಡುವಾಗ ನಾನು ಇರಲಿಲ್ಲ. ಅಲ್ಲಿ ಕುಳಿತಿದ್ದೆ. ಬೆಂಗಳೂರಿಗೆ ಸಂಬಂಧಪಟ್ಟಿದ್ದು. ಇವತ್ತು ವಾಟಾಳ್ ನಾಗರಾಜ್‌ರವರು ವಿಧಾನ ಸೌಧದ ಎದುರುಗಡೆ ವಾಕಿಂಗ್ ಮಾಡುತ್ತಾರೆ. ಏನು ಕಾಲ ಇತ್ತು ಅದು ಗತವೈಭವ, ಈಗ ಈ ಕಾಲ ಬಂದಿದೆ. 1940 ರಲ್ಲಿ ಬೆಂಗಳೂರಿನ ಪಾಪ್ಯುಲೇಶನ್ 3 ಲಕ್ಷ ಇದ್ದರೆ ಈಗ ಅದು 85 ಲಕ್ಷಕ್ಕೆ ಹೋಗಿದೆ. ಬೆಂಗಳೂರು ಬೆಳೆಯುತ್ತಿದೆ. ಐ ಟಿ ಬಿ ಟಿ ಆಗಿದೆ. 35 ಪರ್ಸೆಂಟ್ ಎಕ್ಸ್‌ಪೋರ್ಟ್ ನಾವು ಬೆಂಗಳೂರಿನಿಂದ ಮಾಡುತ್ತಿದ್ದೇವೆ. ಇವತ್ತು ಬೆಂಗಳೂರು ಬೆಳೆಯುತ್ತಿದೆ. ಬೆಳೆಯುತ್ತಿರತಕ್ಕಂಥ ಬೆಂಗಳೂರು ಇವತ್ತು ಬಾಂಬೆ ಆದ ನಂತರ ಅಲ್ಲ ಡೆಲ್ಲಿ ಆದ ನಂತರ, Bangalore is the only city in the country. ಇವೆಲ್ಲಾ ಆಕ್ಟಿವಿಟೀಸ್ ಆಗುತ್ತಿದೆ. ಆಕ್ಟಿವಿಟೀಸ್ ಆಗುತ್ತಿಲ್ಲ ಬೇರೆ ತರಹದ ಕ್ರಿಮಿನಲ್ಸ್ ಬರುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ನಾವು ಬಹಳ ಸಶಕ್ತರಾಗಿದ್ದೇವೆ. ನಾನು ಎರಡು ಮೂರು ನಿದರ್ಶನ ಕೊಡುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ಪೋಲೀಸ್ ಇಲಾಖೆಯ ಇಂಟಲಿಜನ್ಸ್ ಏನು ಕೆಲಸ ಮಾಡುತ್ತಿದೆ ಎಂಬ ಬಗ್ಗೆ ವೆಸ್ಟ್ ಬೆಂಗಾಲ್‌ನಿಂದ ಶಸ್ತ್ರಾಸ್ತ್ರ ತೆಗೆದುಕೊಂಡು ಮದ್ರಾಸ್ ಮುಖಾಂತರ ಬರತಕ್ಕಂಥ ಜನರನ್ನು ರಾತ್ರಿ 1-45 ಗಂಟೆಗಳಲ್ಲಿ ಮುಂಜಾನೆ ಪೋಲೀಸರು ರೈಲ್ವೆ ಪೋಲೀಸರು ರೈಡ್ ಮಾಡಿ ಅವನ ಸೂಟ್‌ಕೇಸ್ ವಶಪಡಿಸಿಕೊಂಡಿದ್ದಾರೆ. ಪತ್ರಿಕೆಯಲ್ಲಿ ಬಂತು, ಟಿವಿಯಲ್ಲಿ ಬಂತು ಒಂದು ಲೇಟೆಸ್ಟ್ ಗನ್ ಏನೋ ಕಾರ್ಪರೇಟ್‌ಗೆ ಹೊಡೆಯುವುದಕ್ಕೆ ಬಂದಿತ್ತು ಏನೋ ಬಂದಿತ್ತು ಇವನ್ನೆಲ್ಲಾ ಮಾಡತಕ್ಕಂಥ ರೀತಿಯಲ್ಲಿ ನಮ್ಮ ಇಂಟೆಲಿಜೆನ್ಸಿ ನೆಟ್‌ವರ್ಕ್, ಹಿಡಿಯತಕ್ಕಂಥ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ಯಶಸ್ವಿಯಾಗಿ ಕೆಲಸ ಮಾಡಿದ್ದೇವೆ. ಇವತ್ತು ಬೆಂಗಳೂರು ನಗರದಲ್ಲಿರತಕ್ಕಂಥ ಐಟಿಬಿಟಿ ಮೇಲೆ ಕಣ್ಣಿದೆ, ದೆಹಲಿಯಲ್ಲಿ ಸಭೆಯಾಗಿದೆ, ಎಲ್ಲಾ ಕಡೆಯಲ್ಲಿ ಸತತವಾಗಿ ಪೋಲೀಸರು ಕೆಲಸ ಮಾಡುತ್ತಿದ್ದಾರೆ, I have to compliment. ಚಿತ್ತರಂಜನ್‌ರವರ ಕೊಲೆಯಾಯಿತು, ಸಿಬಿಐ ಸಿಬಿಐ ಎಂದು ಸಿಬಿಐಗೆ ವಹಿಸಿ ಕೊಟ್ಟರು, ನಾನು 34 ವರ್ಷದಿಂದ ಇದ್ದೇನೆ, ಆದರೆ ನಾನು ಮಾತನಾಡುತ್ತಿರಲಿಲ್ಲ, ಸುಮ್ಮನೆ ಕುಳಿತು ಕೇಳುತ್ತಿದ್ದೆ. ಆವಾಗ ಸಿಬಿಐ ತನಿಖೆ ಏನಾಯಿತು? ಅಸ್ನೋಟಿಕರ್ ಕೊಲೆ

ಕೇಸ್‌ನಲ್ಲಿ, Mirji went to Dubai. ಮಿರ್ಜಿಯವರು ದುಬೈನ ಅಂಡರ್‌ವರ್ಲ್ಡ್‌ನ ಒಳಗೆ ಹೋಗಿ ಯಾರು ಕೊಲೆ ಮಾಡಿದ್ದನೊ ಅವನನ್ನು ಹಿಡಿದು ತಂದಿದ್ದಾರೆ, This is the record of the Karnataka Police. ನಾನು ವೀರಪ್ಪನ ಹತ್ಯೆ, ಬೇರೆ ಕಡೆಗೆ ಹೋಗುವುದಿಲ್ಲ, ಅದು ಪ್ರಾಸಂಗಿಕವಾಗಿ ಆಯಿತು, I was a also the Home Minister. ಒಂದು ಘಟನೆಯನ್ನು ಹೇಳುತ್ತಿದ್ದೇನೆ, ರಾಂಪುರ ಪೋಲಿಸ್ ಠಾಣೆಗೆ ನಾವು ಹೋಗಿದ್ದೆವು, ರಾಂಪುರ ಪೋಲಿಸ್ ಠಾಣೆಗೆ ಹೋಗಿ ಬಂದ ಅರ್ಧ ಗಂಟೆಯಲ್ಲಿ ಒಂಭತ್ತು ಪೋಲಿಸರಿಗೆ ವೀರಪ್ಪನ್ ತಂಡ ಬಂದು ಹೊಡೆದರು, ನಮಗೆ ಹೊಡೆಯುವುದಕ್ಕೆ ಬಂದರೋ ಯಾರಿಗೆ ಹೊಡೆಯಲು ಬಂದರೋ ಇವೆಲ್ಲಾ ನಡೆದ ಘಟನೆಗಳು. ಕೊನೆಗೆ ವೀರಪ್ಪನ್ ಸತ್ತುಹೋದ, ಆ ಒಂದು ಭಯದ ವಾತಾವರಣ ಏನಿತ್ತು ಅದೆಲ್ಲಾ ಹೋಗಿದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಏನಾಗಿದೆ, ನಕ್ಸಲೈಟ್ ಚಟುವಟಿಕೆ ನಡೆಯುತ್ತಿದೆ. 1950 ರಲ್ಲಿ ತೆಲಂಗಾಣ ಮೂವ್‌ಮೆಂಟ್ ಬಂತು ಏಕೆಂದರೆ, ನಾವು ಗುಲ್ಬರ್ಗಾದಿಂದ ಹೈದರಾಬಾದ್‌ಗೆ ಹೋಗಿ ನಾವೆಲ್ಲಾ ವಿದ್ಯಾಭ್ಯಾಸ ಮಾಡಿದವರು, ಅಲ್ಲಿ ನಾನು 9 ವರ್ಷವಿದ್ದೆ. ಶ್ರೀರಾಮರೆಡ್ಡಿ ಗೊತ್ತು ರಾಘಭದ್ರಗೌಡರು ಗೊತ್ತು, ಮೊಹಿದ್ದೀನ್ ಗೊತ್ತು, ಬಿ.ಸುಂದರರಾಯರು ಎಂಬ ಲೀಡರ್, ಬಸವಪುನ್ನಯ್ಯ ಇವೆಲ್ಲಾ ರಾಜಕೀಯ ಮುತ್ಸದ್ಧಿಗಳಿದ್ದರು. ತೆಲಂಗಾಣ ಮೂವ್‌ಮೆಂಟ್, between land less and land lords. Ravinarayana Reddy was first time elected to the Parliament from Nallagunda District. ಬಹಳ ಅತ್ಯಂತ ಬಹುಮತದಿಂದ ಆರಿಸಿ ಹೋಗಿದ್ದಾರೆ. ನಾನು ಸಮರ್ಥನೆ ಮಾಡತಕ್ಕಂಥ ರೀತಿಯಲ್ಲಿ ಹೇಳುತ್ತಿದ್ದೇನೆಂದು ಭಾವಿಸಬಾರದು. ಈ ಒಂದು ವಾದ, ಇಸಂ ದೇಶದಲ್ಲೇನು ಇದೆ, ಈ ರಾಜ್ಯದಲ್ಲಿರುವ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಏನಿದೆ, ನಮ್ಮ ಸಿಸ್ಟಂ ಏನಿದೆ, ಏನು ವಿದ್ಯಾರ್ಥಿಗಳಿದ್ದಾರೆ, they have become frustrated. ಯಡಿಯೂರಪ್ಪನವರೆ, ತೆಲಂಗಾಣ ಮೂವ್‌ಮೆಂಟ್ 6 ತಿಂಗಳು ನಡೆಯಿತು, ಕುಚಂಪಳ್ಳಿಯವರು ಕ್ರಾಂತಿಯಾಗಿ ವಿನೋಭಾವ ಬಳಿ ಬಂದರು. ಭೂದಾನ ಪ್ರಾರಂಭವಾಗಿದ್ದೆ ಕುಚಂಪಳ್ಳಿ ತೆಲಂಗಾಣದಿಂದ. ಅದಕ್ಕೆ ನಕ್ಸಲೈಟ್ ಮೂವ್‌ಮೆಂಟ್ ಏನಿದೆ, ನಾನು ರಾಜ್ಯದ ಮುಖ್ಯಮಂತ್ರಿಯಾಗಿ, ``This is a socio-economic problem,'' ಎಂದು ಹೇಳಿದೆ, ಮಾತುಕತೆಯಿಂದ ಬಗೆಹರಿಸಿಕೊಳ್ಳಬೇಕು. ಪರ್ಟಿಕ್ಯುಲರ್ ಪ್ಲೇಸ್‌ನಲ್ಲಿ ಪ್ರಿವೇಲಿಂಗ್ ಪ್ರಾಬ್ಲಂ ಏನಿದೆ ಅದರ ಒಂದು ಎಕ್ಸ್‌ಪ್ಲಾಯ್ಟ್ ಮಾಡಿ ನಕ್ಸಲೈಟ್ ಚಟುವಟಿಕೆ ಏನು ನಡೆಯುತ್ತಿದೆ, ದಲಿತರ ಸಮಸ್ಯೆ ಇದೆ, ವಿದ್ಯಾರ್ಥಿಗಳ ಸಮಸ್ಯೆ ಇದೆ, ಫಾರೆಸ್ಟ್‌ನಲ್ಲಿ ಟ್ರೈಬಲ್ ಸಮಸ್ಯೆ ಇದೆ,. ಈ ಬಗ್ಗೆ ಅಭಿವೃದ್ಧಿ ಕೆಲಸ ಮಾಡಿದರೆ ಸರಿ ಎನ್ನುವುದು ನನ್ನ ವಾದ. ದೇಶದ ಜನರ ಸಂರಕ್ಷಣೆ ಮಾಡುವುದೂ ಕೂಡ ನಮ್ಮ ಆದ್ಯ ಕರ್ತವ್ಯ. ಚಿಕ್ಕಮಗಳೂರಿನಲ್ಲಿ ಸೆಂಟ್ರಲ್ ಫಾರೆಸ್ಟ್, ನ್ಯಾಷನಲ್ ಪಾರ್ಕ್ ಇದೆ, ನಮ್ಮ ದೇಶದ ಶೇಕಡ 15 ರಷ್ಟು richest ಫಾರೆಸ್ಟ್ ಆ ಭಾಗದಲ್ಲಿದೆ. ಎಷ್ಟೋ ಸಾರಿ ನಾವು ಬೆಂಗಳೂರಿನಲ್ಲಿರಲಿ, ದೆಹಲಿಯಲ್ಲಿರಲಿ, ಸಂಡೆ, ಸಾಟರ್ಡೆ ನಾವು ಊರಿಗೆ ಹೋಗುತ್ತೇವೆ, ಅದು ಸೆಂಟಿಮೆಂಟಲ್ ಅಟ್ಯಾಚ್‌ಮೆಂಟ್, ಭಾವನಾತ್ಮಕವಾದುದು; ನೀವು ಬೇಕಾದಷ್ಟು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಟ್ಟರೂ ಕೂಡ ಟ್ರೈಬಲ್ ಜನರು ಅಲ್ಲಿ ಬಿಡುವುದಕ್ಕೆ ತಯಾರಿಲ್ಲ. ನಾನು ಎಲ್ಲಿಯವರೆಗೆ ಹೋಗಿದ್ದೇನೆಂದರೆ, ನಮ್ಮ ವಿಠಲ್ ಎನ್ನತಕ್ಕಂಥ ಅಲ್ಲಿನ ಟ್ರೈಬಲ್ ಲೀಡರ್ ಜೊತೆ ಕೂಡ ಮಾತು ಕಥೆ ಆಡಿ ಬಂದಿದ್ದೇನೆ. ನಾನು ಒಪ್ಪುತ್ತೇನೆ, ಕೆಲವೇ ಇಂಟಲೆಕ್ಚುಯಲ್ಸ್

ಜೊತೆ ಮಾತನಾಡಿ, ಈ ಒಂದು ವಾದ ಬೆಳವಣಿಗೆ ಇವತ್ತು ನಡೆಯುತ್ತಿದೆ, ಅದರ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡಿದರೆ ನಿಮ್ಮ ಮನಸ್ಸಿನಲ್ಲಿ ಏನಾದರೂ ಬರಬಹುದು, ಇದರ ಎಲ್ಲಾ ಹಿನ್ನೆಲೆಯಲ್ಲೂ ಕೂಡ ಇವತ್ತು ಕೆಲಸ ಮಾಡಬೇಕಾಗಿದೆ. ಸನ್ಮಾನ್ಯ ಎಸ್.ಎಂ.ಕೃಷ್ಣರವರು ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ 60 ಕೋಟಿ ರೂಪಾಯಿಗಳ ಅಭಿವೃದ್ಧಿ ಕೆಲಸ ಮಾಡತಕ್ಕಂಥದ್ದಕ್ಕೆ ಕ್ರಮ ತೆಗೆದುಕೊಂಡಿದ್ದೆವು, ಇನ್ನೂ ಕೂಡ ಆ ಪ್ಯಾಕೇಜ್ ಬಂದಿಲ್ಲವೆಂದು ತಾವು ಪ್ರಸ್ತಾಪ ಮಾಡಿದ್ದಿರಿ. ಇವತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಎನ್ವಿರಾನ್‌ಮೆಂಟ್ ಕ್ಲಿಯರ್ ಆಗಿಲ್ಲ. ನಾವು ಬಂದ ಮೇಲೆ, the Development Commissioner, now he is there. RDPR Secretary Baligar ಇವರೆಲ್ಲಾ ಸ್ಥಳದಲ್ಲೇ ಚಿಕ್ಕಮಗಳೂರಿನಲ್ಲಿ ಮೂರು ದಿವಸದಿಂದ ಇದ್ದಾರೆ, ಅವರು ನಾಳೆ ಬರುವವರಿದ್ದಾರೆ. ಮೊನ್ನೆ ನಾವು ಸಚಿವಸಂಪುಟದಲ್ಲಿ, ಇವತ್ತು ಪಟ್ಟಾ ಕೊಡುವ ರೀತಿಯಲ್ಲಿ ಸೀಮಿತವಾಗಿ ಆ ಭಾಗದಲ್ಲಿ ಏನು ಸಮಸ್ಯೆಗಳಾದ ರಸ್ತೆ ಮಾಡುವುದು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅದನ್ನು ಮಾಡಿಕೊಡುವ ಬಗ್ಗೆ ನಾವು ಈಗಾಗಲೇ ಕ್ರಮವನ್ನು ಕೂಡ ತೆಗೆದುಕೊಂಡಿದ್ದೇವೆ. ಒಂದು ಘಟನೆ ನಡೆಯಿತು, ಅದು ಆಗಬಾರದು ಮಾನ್ಯ ಸದಸ್ಯರಾದ ರಮೇಶ್ ಕುಮಾರ್‌ರವರು ಸದನದಲ್ಲಿ ಇಲ್ಲ, ಸಾಕೇತ್ ರಾಜನ್, ಶಿವಲಿಂಗ್‌ರವರ ಹತ್ಯೆ. ಸಾಕೇತ್ ರಾಜನ್‌ರವರು 21 ವರ್ಷಗಳ ಹಿದೆಯೇ ಮನೆಯನ್ನು ಬಿಟ್ಟಿದ್ದಾರೆ, ಅವರು ರಾಷ್ಟ್ರಮಟ್ಟದಲ್ಲಿ ಹಾಗೂ ಆಂಧ್ರಪ್ರದೇಶದಲ್ಲಿ ನಕ್ಸಲೈಟ್ ಮೂವ್‌ಮೆಂಟ್‌ನಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಪತ್ನಿಯೂ ಕೂಡ ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಹತ್ಯೆಯಾಗಿದ್ದಾಳೆಂದು ವರ್ತಮಾನವಿದೆ. ಅವರು ಎಲ್ಲೆಲ್ಲಿ ಇಂತಹ ಸಮಸ್ಯೆ ಬಂದಾಗ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಇವನ್ನು ಕೇಂದ್ರವಾಗಿಟ್ಟುಕೊಂಡು ಚಟುವಟಿಕೆ ಮಾಡುತ್ತಿದ್ದರು. ಇವತ್ತು ರಾಜ್ಯದಲ್ಲಿ ನೆಕ್ಸಲೈಟರ ಚಟುವಟಿಕೆ ಏನು ನಡೆಯುತ್ತಿದೆ, ಅದು ನೆರೆರಾಜ್ಯದಲ್ಲೂ ಕೂಡ ನಡೆಯುತ್ತಿದೆ, ಅದು ಎಷ್ಟರ ಮಟ್ಟಿಗೆ, you are going to appreciate the action of the Police Inspector ..... ರಾತ್ರಿ ನಾಲ್ಕು ಗಂಟೆಗೆ ಶ್ರೀನಿಧಿ ಎಂಬ ಇನ್‌ಸ್ಪೆಕ್ಟರ್, ಅವರು ಬ್ಯಾಟರಿ ಹಾಕಿ ಹೋಗತಕ್ಕಂಥ ಕಾಲದಲ್ಲಿ ಹಿಡಿದಿದ್ದಾನೆ ಆಕಸ್ಮಾತ್ತಾಗಿ ಸಾಕೇತ್‌ರಾಜನ್ ಹಾಗೂ ಶಿವಲಿಂಗು ಹೋದರು. ಆದರೆ You are not appreciating the police action. ರಾತ್ರಿ ನಾಲ್ಕು ಗಂಟೆಯಲ್ಲೂ ಪೋಲಿಸ್ ಡಿಪಾರ್ಟ್ ಎಷ್ಟು ಸತತವಾಗಿ ಎಚ್ಚರಿಕೆಯಿಂದಿದ್ದಾರೆ, ಬ್ಯಾಟರಿ ಟಾರ್ಚ್‌ಲೈಟ್ ನೋಡಿ ಆ ಘಟನೆಯಾಯಿತು ಇಲ್ಲಿಗೆ ಬಂದರು, ಅವರು ಬಂದ ಮೇಲೆ ರಾಜ್ಯದ ಮುಖ್ಯಮಂತ್ರಿಯಾಗಿ, ನಾನು ಚಿಕ್ಕಂದಿನಿಂದಲೂ, ವಿದ್ಯಾರ್ಥಿ ಜೀವನದಿಂದಲೂ ವಿದ್ಯಾರ್ಥಿ ಹೋರಾಟದಿಂದ ಬಂದವನು. ರಾಷ್ಟ್ರಮಟ್ಟದ ಯಾವ್ಯಾವ ಎಲ್ಲಾ ಪೋಗ್ರೆಸಿವ್ ಪಾರ್ಟಿಸ್ ಇವೆ. ನಾನು ಅವರ ಜೊತೆಯಲ್ಲಿದ್ದವನು. ಆದರೂ ಕೂಡ ರಾಜ್ಯದ ಮುಖ್ಯಮಂತ್ರಿಯಾಗಿರುವುದರಿಂದ ಇವತ್ತು ಕೆಲವು ಜನ ಪ್ರೊಫೆಸರ್ಸ್ ಬಂದರು, Prof. Ramakrishna has met me. ಬಂದರು, ಅವರು, ಏನ್ರಿ ಸಾಕೇತ್ ರಾಜನ್ ಇಂಟಲೆಕ್ಚುಯಲ್ ಎಂದರು. ನೋಡ್ರಿ ಇಂಟಲೆಕ್ಚುಯಲ್ ಅನ್ನು ಯಾರು ನೋಡುತ್ತಾರೆ, forensic science ನಲ್ಲಿ faesilites ಇಲ್ಲ I have ordered. ಅದರ ಬಗ್ಗೆ ಕಳಕಳಿ ಇರಬೇಕಾಗುತ್ತದೆ ಅದು ಯಾರೂ ನಾಚಿಕೆ ಪಡತಕ್ಕಂಥದ್ದಲ್ಲ, ಅದನ್ನು ನಾವು day to day ಅಡ್ಮಿಸ್ಟ್ರೇಷನ್‌ನಲ್ಲಿ I have ordered to bring the body. I have instructed the poba officers, ಅವರ ತಾಯಿ ವಿಜಯಲಕ್ಷ್ಮಿ

ಏನಿದ್ದಾರೆ ಅವರನ್ನು ನಿಮ್ಮ ಮಗ ಸತ್ತಿದ್ದಾನೆ, ಏನು ಮಾಡಬೇಕೆಂದು ಕೇಳಿ ಎಂದು ಹೇಳಿದೆ. ಇಲ್ಲ ನನ್ನ ಮಗ 21 ವರ್ಷಗಳ ಹಿಂದೆಯೇ ನಮ್ಮ ಮನೆಯನ್ನು ಬಿಟ್ಟು ಹೋಗಿದ್ದಾನೆ ನಮಗೇನೂ ಸಂಬಂಧವಿಲ್ಲ, ಪೋಲೀಸ್‌ನವರೇ ಮಾಡಬಹುದು ಎಂದಿದ್ದಾರೆ, I have instructed the police officer. ಪೇರೆಂಟ್ಸ್ ಒಂದು ಪತ್ರವನ್ನು ಕೊಟ್ಟ ಮೇಲೆ ನಾವು ಅದನ್ನೇ ಆಧಾರವಾಗಿಟ್ಟುಕೊಂಡು ಮಾಡಬೇಕಾಗುತ್ತದೆ. ಕೆಲವು ಮಂದಿ, ನಮಗೆ ಹ್ಯಾಂಡ್ ಓವರ್ ಮಾಡಬೇಕೆಂದು ಕೇಳಿದರು. ಅದರ ಮಧ್ಯೆ ಪೋಲಿಸ್‌ನವರು ಆ ಲೆಟರ್ ತೆಗೆದುಕೊಂಡು ಬಂದರು, ಆ ಪ್ರಕಾರ ಅಂತಿಮ ಸಂಸ್ಕಾರವಾಯಿತು. ವರರಾವ್ ಗದ್ದರ್ ಬಂದರು, ಎಲ್ಲಾ ಕಡೆಗೆ ಬಂದು, ನನ್ನ ಕಡೆಗೂ ಬಂದರು. ಏನ್ರೀ ಈ ತರಹದ ಒಂದು ಹತ್ಯೆಯಾಗಿದೆ ಅಂದರು. ನಾನು ಹೇಳಿದೆ ನೋಡಪ್ಪ ಅದರ ಬಗ್ಗೆ ಏನೂ ಇಲ್ಲ. ಇವೆಲ್ಲಾ ಮಾತುಕತೆ ನಡೆದವು. ಯಾಕೆ ಈ ಮಾತು ಹೇಳುತ್ತೇನೆ ಅಂದರೆ ಅವತ್ತೇ ಅವರು ಹೇಳಿದರು ಪ್ರತೀಕಾರ ಎಂದು.. ಈ ತರಹ ಎಲ್ಲಾ ಕಡೆ ಬರುತ್ತದೆ. ಮನುಷ್ಯನ ರಾಜಕೀಯ ಜೀವನದಲ್ಲಿ ಇವೆಲ್ಲಾ ಘಟನೆಗಳು ಬರುತ್ತವೆ. ನಾವು ಎದುರಿಸಬೇಕಾಗುತ್ತದೆ. ಮತ್ತು ವಿರೋಧಪಕ್ಷದ ನಾಯಕರಾಗಿ ನೀವು ಕೇವಲ ಒಂದು ಪಕ್ಷಕ್ಕಲ್ಲ ಯಾವ ರೀತಿಯಾಗಿ ನಾವು ಎಲ್ಲಾ ಪಕ್ಷಗಳಿಗೆ ಮುಖ್ಯಮಂತ್ರಿಯಾಗಿದ್ದೇವೆ ಅದೇ ರೀತಿ ಅವರೂ ರಾಜ್ಯದ ವಿರೋಧ ಪಕ್ಷಗಳ ನಾಯಕರು ಇವತ್ತು ಪ್ರತಿಯೊಂದು ವಿಚಾರಧಾರೆ ಇರುವ ಜನರ ಭಾವನೆಗಳನ್ನು ತಿಳಿಯುವಂತಹ ಅರ್ಥಮಾಡಿಕೊಳ್ಳುವಂತಹ ಪ್ರಯತ್ನ ಈ ಸಮಾಜದಲ್ಲಿ ಮಾಡಬೇಕಾಗುತ್ತದೆ. ಆದ ಮೇಲೆ ಪೋಲೀಸ್ ಇಲಾಖೆ ಆಜ್ಞೆ ಉಲ್ಲಂಘಿಸಿದರು ಎಂದು. ಈ ಸರ್ಕಾರ ಹತ್ತು ತಿಂಗಳ ಕಾಲ ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿಕೊಂಡು ಬಂದಿದ್ದೇವೆ. we have created the public opinion. ಕಿಂಚಿತ್ ಮಾತ್ರ ನಾವು ಎಡವಿಲ್ಲ. ಸರಿಯಾದ ರೀತಿಯಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಕೆಲಸ ನಾವು ಮಾಡಿದ್ದೇವೆ. ಅದಾದ ಮೇಲೆ ಪಾವಗಡದಲ್ಲಿ ಘಟನೆ ನಡೆಯಿತು. ತಮಗೆ ಗೊತ್ತಿದೆ. ಬೀದರ್‌ನಿಂದ ಆಂಧ್ರ ಬಾರ್ಡರ್ ಏನಿದೆ, ಅಲ್ಲಿಗೆ ಬಂದು ರಾತ್ರಿ ಹತ್ಯೆಯಾಯಿತು. ನಾನು ಹೋಲಿಕೆ ಮಾಡುವುದಿಲ್ಲ. ರಾಷ್ಟ್ರಮಟ್ಟದಲ್ಲಿ ಎಷ್ಟಾಗಿದೆ ಅನ್ನುವುದಲ್ಲ. ಮೊನ್ನೆ ಕರೀಂನಗರದಲ್ಲಿ ಹತ್ಯೆಯಾಯಿತು. ಗುಂಟೂರಿನಲ್ಲಿ ಆಯಿತು. ಮೆಹಬೂಬ ನಗರದಲ್ಲಿ ಬರುವ ಐದು ಬಸ್‌ಗಳ ಪೈಕಿ ಒಂದು ಬಸ್ ಕರ್ನಾಟಕದ್ದು ಹೋಯಿತು. ಎಲ್ಲಾ ಕಡೆ ದಿನೇ ದಿನೇ ಈ ತರಹದ ಒಂದು ಭಾವನೆ, ಪ್ರವೃತ್ತಿ ಬೆಳೆಯುತ್ತಿದೆ. ಶ್ರೀ ರಾಜಶೇಖರರೆಡ್ಡಿ we is the first chief minister ಅವರನ್ನು ಅಭಿನಂದಿಸಬೇಕಾಗುತ್ತದೆ, ಮಾಸಾಗಿ ಎಲ್ಲಾ ಕಡೆಯಿಂದ ನಕ್ಸಲೈಟರನ್ನು ಕರೆಸಿದರು. ಮಾತುಕತೆ ಮಾಡಿದರು, ಮಾತುಕಥೆ ಮುಖಾಂತರ ಅವರ ಬೇಡಿಕೆಗಳು ಏನು ಏನಿವೆ ಅವನ್ನು ಪೂರೈಸತಕ್ಕಂಥ ರೀತಿಯಲ್ಲಿ ಅದು ಕೂಡ ಆಗಲಿಲ್ಲ. ನಮ್ಮ ದೇಶದ ಗೃಹಮಂತ್ರಿಯಾದಂತಹ ಶಿವರಾಜಪಾಟೀಲರೂ ಕೂಡ ಆಂಧ್ರಪ್ರದೇಶಕ್ಕೆ ಹೋಗಿಬಂದರು. ಶ್ರೀ ಹೆಚ್ ಕೆ ಪಾಟೀಲರು ಹೋಗಿದ್ದರು, ಮೊನ್ನೆ ನನ್ನ ಜೊತೆ ಕಂದಾಯ ಸಚಿವರು ಇದ್ದರು. ಮಾನ್ಯ ಶಿವರಾಜಪಾಟೀಲರ ಜೊತೆ ನಾವು ಮಾತನಾಡಿದೆವು. ಅವರಿಗೆ ಈ ನಕ್ಸಲೈಟ್ಸ್ ಹಾವಳಿ ಹೆಚ್ಚಾಗುತ್ತಿದೆ ಎಂದು ಹೇಳಿದೆವು ರಾಷ್ಟ್ರಮಟ್ಟದಲ್ಲಿ ಇತರ ಕಡೆಯಲ್ಲಿ ಏನು ನಡೆಯುತ್ತಿದೆ, ಆ ರೀತಿ ನಿಮ್ಮ ಕರ್ನಾಟಕದಲ್ಲಿ ಇಲ್ಲ ಅಂದರು. with all that i have requested Mr.Shivaraj Patel. ಸರ್ ಒಮ್ಮೆ ಬನ್ನಿರಿ, ಬೆಂಗಳೂರಿಗೆ ಬಂದರೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರನ್ನೂ ಕರೆಸುವೆವು, ಸಮಾಜದ

ಬಗ್ಗೆ ಚಿಂತನೆ ಮಾಡುವ ಎಲ್ಲರನ್ನೂ ಕರೆಸೋಣ, ಮಾತುಕತೆ ಆಡೋಣ ಎಂದು ಹೇಳಿದೆ. ಯಾವ ತರಹವಾಗಿ ಇದಕ್ಕೆ ನಾವು ಪರಿಹಾರ ಹುಡುಕುವ ದಿಸೆಯಲ್ಲಿ ನಾನು ಹೇಳುತ್ತಿದ್ದೇನೆಂದರೆ ಈ ರಾಜ್ಯದ ಮುಖ್ಯಮಂತ್ರಿಯಾಗಿ ಈ ಒಂದು ಸೂಕ್ಷ್ಮತೆಯ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಹಿಡಿಯುವಲ್ಲಿ ನಮ್ಮದೇ ಆದ ಪ್ರಯತ್ನ ಇವತ್ತು ಮಾಡಿದ್ದೇವೆ. ಇವತ್ತು ವಿಧಾನಸೌಧ, ಪಾರ್ಲಿಮೆಂಟ್‌ಗಳ ಸಂರಕ್ಷಣೆ. ವೆಂಕಯ್ಯನಾಯ್ಡುರವರು ಪ್ರಚಾರಕ್ಕೆ ಹೋದಾಗ ಏನಾಯಿತು. ಎಲ್ಲಾ ಕಡೆ ನಾವು ನಂಬಲಾರದಂತಹ ಊಹಿಸಲಾರದಂತಹ ಘಟನೆ ಈ ಒಂದು ರಾಷ್ಟ್ರದಲ್ಲಿ ನಡೆಯುತ್ತಿದೆ. ನಾನು ಶಿವಮೊಗ್ಗಕ್ಕೆ ಹೋದೆ. ಸಿಂಧ್ಯಾ ಅವರು ಬರಬೇಕಾಗಿತ್ತು, ಬಹಳ ಇಂಟರೆಸ್ಟಾಗಿರುತ್ತಿತ್ತು. ಅವರೂ ಬರಲಿಲ್ಲ. ಒಂದು ಕಡೆ ಬಂಗಾರಪ್ಪ, ಲೋಕಸಭಾ ಸದಸ್ಯರು, ಬಿಟ್ಟುಹೋದರು. ಒಂದು ಕಡೆ ಯಡಿಯೂರಪ್ಪನವರು ಈಶ್ವರಪ್ಪನವರು, ಒಂದು ಕಡೆ ಕಾಗೋಡು ತಿಮ್ಮಪ್ಪನವರು – ನಮ್ಮ ಗತಿ ಏನಾಗಿತ್ತು? ವಾಟಾಳ್ ನಾಗರಾಜ್ ನೀವೂ ಇರಬೇಕಾಗಿತ್ತು. ನಾನು ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪರವರಿಗೆ ಮತ್ತು ಈಶ್ವರಪ್ಪನವರಿಗೆ ನಾನು ಅಭಿನಂದಿಸಬೇಕಾಗಿದೆ. ಆ ಜಿಲ್ಲೆಗೆ ಮೆಡಿಕಲ್ ಕಾಲೇಜ್ ಕೊಡುವ ಬಗ್ಗೆ ಮೊದಲ ಐದರಲ್ಲಿ ಬರಲಿಲ್ಲ. ಆರನೇದರಲ್ಲಿ ಬಂತು. ಯಡಿಯೂರಪ್ಪನವರ ನೇತೃತ್ವದಲ್ಲಿ ಅಲ್ಲಿರತಕ್ಕವರಲ್ಲ ಬಂದರು. ಒಳ್ಳೆಯ ಕಾರ್ಯಕ್ರಮ ಆಯಿತು. ಅಲ್ಲಿ ನಡೆದ ಪತ್ರಕರ್ತರ ಸಮ್ಮೇಳನದಲ್ಲಿ ಏನು ಹೇಳಿದೆ ಎಂಬುದನ್ನು ಹೇಳುತ್ತೇನೆ ಸಾರ್. ಎಲ್ಲಾ ಕಡೆ ವಿಶ್ವವಿದ್ಯಾನಿಲಯಗಳಿವೆ, ಪತ್ರಕರ್ತರೂ ನಮ್ಮ ಭಾವನೆಗಳನ್ನು ಹೇಳುವ ರೀತಿಯಲ್ಲಿ ಏನೆಂದರೆ ಇದೊಂದು ಇಜಂ ಇದೆ, ವಾದ ಇದೆ, ವಾದದ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ಕಡೆಗೆ ಬುದ್ಧಿಜೀವಿಗಳ ಮಟ್ಟದಲ್ಲಿ ಚರ್ಚೆಯಾಗುತ್ತಾ ಇದೆ. ಎಲ್ಲೆಲ್ಲಿ ನಡೆಯುತ್ತಿದೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆಯೇ ಎಂದರು, ನಾನು ಹೋಂ ಮಿನಿಸ್ಟರ್ ಇದ್ದೇನೆ, ಮೊದಲು ಸಿಂಧ್ಯಾ ಇದ್ದರು ಕೇಳಿರಿ; ಎಲ್ಲಾ ವಿಚಾರಗಳೂ ಗೃಹಮಂತ್ರಿಗಳ ಗಮನದಲ್ಲಿರುತ್ತದೆ. ನಾನು ಕುವೆಂಪುದಲ್ಲೇ ಇದೆ ಎಂದು ಹೇಳಲಿಲ್ಲ; ಅವಹೇಳನ ಮಾಡತಕ್ಕಂಥ ರೀತಿಯಲ್ಲಿ ಅಲ್ಲ. ಏಕೆಂದರೆ ಯಾರೇ ಇರಲಿ ರಾಜಕೀಯ ಪಕ್ಷ, ಅವರದೇ ಆದ ಒಂದು ಸಿದ್ಧಾಂತ ಇದೆ. ತಮ್ಮ ಜೀವನದಲ್ಲಿ ಪ್ರತಿಪಾದನೆ ಮಾಡುವ ವಿಚಾರಧಾರೆಗಳಿವೆ, ಅದರ ಬಗ್ಗೆ ಏನಿಲ್ಲ, ಪರ್ಟಿಕಲರ್ ಆಗಿ ವಿಶ್ವವಿದ್ಯಾಲಯ ಎಂದು ಇಲ್ಲ, ನಮ್ಮ ಶಿಕ್ಷಣ ಸಚಿವರು ಹೋಗಿ ಏನೋ ಹೇಳಿದರು, ಇದೆಲ್ಲಾ ಬರುತ್ತದೆ. ನನ್ನದೇನು ಅಂದರೆ ಎಲ್ಲಾ ಕಡೆಗೆ ಕೌಂಟರ್ ಮಾಡಲು ಹೋಗುವ ಪ್ರವೃತ್ತಿ ಇಲ್ಲ. ತಾಳ್ಮೆಯಿಂದ ಸಹೃದಯತೆಯಿಂದ ಹೋಗುತ್ತೇನೆ, ಅದಕ್ಕೇ ಇಲ್ಲಿ ಕೂತಿದ್ದೇನೆ, ಈಗ ಕೊಯಲಿಷನ್‌ನಲ್ಲಿ ಸಿಂಧ್ಯಾ ಮತ್ತು ಪ್ರಕಾಶ್‌ರವರು ಕೂಡಿ ಹೋಗಬೇಕಲ್ಲಾ ಅಂದರು. ಅದಕ್ಕೇ ಒಂದು ಮಾತು ಹೇಳುತ್ತಿದ್ದೇನೆ ಬೇರೆ ಸಂದರ್ಭದಲ್ಲಿ ನಾನು ಮಾತನಾಡುತ್ತೇನೆ. ಸೆಂಟ್ರಲ್ ಫಾರೆಸ್ಟ್ ಬಗ್ಗೆ ಹೇಳಿದ್ದೇನೆ, ಮೊನ್ನೆ ಮೈನ್ಸ್ ಬಗ್ಗೆ ಇಂಟರ್‌ನ್ಯಾಷನಲ್ ಸಮ್ಮೇಳನ ಇತ್ತು. ಶ್ರೀ ಸಿಸ್ ರಾಮ್ ಓಲಾ ಕೇಂದ್ರದ ಮಂತ್ರಿಗಳು ಬಂದಿದ್ದರು, ಒಡಾ ಎಂದು ಹೇಳಿ ಸಂಬಂಧಪಟ್ಟ ಸೆಕ್ರೆಟರಿ ಮೊನ್ನೆ ಪ್ರಧಾನಮಂತ್ರಿಗಳು ರಿವ್ಯೂ ಮಾಡುವ ಕಾಲದಲ್ಲಿ ಯಾಕೆ ತಡವಾಗುತ್ತದೆ ಎಂಬ ಬಗ್ಗೆ ಚರ್ಚೆ ಆಯಿತು. ಇವತ್ತು ಭದ್ರಾ ಪ್ರಾಜೆಕ್ಟ್ 2800 ಕೋಟಿ ರೂ ಜೆ ಎಚ್ ಪಟೇಲರ ಕಾಲದಲ್ಲೇ ಹೇಳಿದ್ದರು. ಇನ್ನೂ ಕೂಡ 8000 ಎಕರೆ ಫಾರೆಸ್ಟದ್ದು ಕ್ಲಿಯರೆನ್ಸ್ ಇಲ್ಲ ಮೊನ್ನೆ ನಾನು ಜೆ ಎಚ್ ಪಟೇಲರ ಕ್ಷೇತ್ರಕ್ಕೆ ಹೋಗಿದ್ದೆ ನಮ್ಮ ಮಹಿಮಾ ಪಟೇಲ್ ಇಲ್ಲ., ಅಲ್ಲಿ ಉಮ್ರಾಣಿ ಅಮದ್‌ಪುರದಲ್ಲಿ 96 ಕೋಟಿರೂ ಗಳಿಗೆ ನಾವು ಬಂದ ಮೇಲೆ ಅದಕ್ಕೆ ಒಪ್ಪಿಗೆ ಕೊಡಿಸಿದ್ದೇವೆ. ನೀರಾವರಿಗಾಗಿ ಎಲ್ಲಾ ಕಡೆಗೆ ಫಾರೆಸ್ಟ್

ಕ್ಲಿಯರೆನ್ಸೇನಿದೆ ಅದನ್ನು ಪಡೆದುಕೊಳ್ಳಲು ನಾವು ಬಹಳ ಪ್ರಯತ್ನ ಪಟ್ಟಿದ್ದೇವೆ. ಮೊನ್ನೆ ಸಿಂಧ್ಯಾ ಹಾಗೂ ನಾವು ಕೂತು ಕುದುರೆಮುಖದ ಗಣಿಗಾರಿಕೆ ಬಗ್ಗೆ ಚರ್ಚೆ ಮಾಡಿದೆವು 10 ಸಾವಿರ ನೌಕರರು, ಅಲ್ಲಿ ಇದ್ದಾರೆ ಮುಚ್ಚತಕ್ಕಂತಹ ಕಾಲದಲ್ಲಿ ಅವೆಲ್ಲಾ ಸಮಸ್ಯೆಗಳು ಅಂದರೆ ಇಂಟರ್‌ಡಿಪೆಂಡೆಂಟ್, ಅದರ ಬಗ್ಗೆ ಕೂಡ ನಾವು ಮಾಡಬೇಕಾಗಿದೆ. ನೀವೂ ಪ್ರಸ್ತಾಪ ಮಾಡಿದ್ದೀರಿ. ಈ ಭಾಗದ ಚಾಮರಾಜನಗರ ಜಿಲ್ಲೆಯಲ್ಲಿ ಆಗುತ್ತಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಒಟ್ಟಾರೆ ಅಂದರೆ ಸರ್ಕಾರ ಇದರ ಬಗ್ಗೆ ಬಹಳ ಸಶಕ್ತವಾಗಿದೆ. ನಕ್ಸಲಿಯ ಚಟುವಟಿಕೆ ಏನು ಬೆಳೆಯುತ್ತಿದೆ ಅದನ್ನು ನಿಯಂತ್ರಿಸುವ ರೀತಿಯಲ್ಲಿ ಇವತ್ತು ಅಭಿವೃದ್ಧಿ ಕೆಲಸಕಾರ್ಯಗಳು ಮಾಡಲೇಬೇಕು. ಅಭಿವೃದ್ಧಿ ಕೆಲಸಗಳಿಗಾಗಿ ಈಗಾಗಲೇ 25 ಕೋಟಿ ರೂ ಇಟ್ಟಿದ್ದೇವೆ. ನಮ್ಮ ಅಭಿವೃದ್ಧಿ ಆಯುಕ್ತರು ಈಗ ಅಲ್ಲೇ ಇದ್ದಾರೆ, ಅವರೂ ಕೂಡ ಬರುತ್ತಾ ಇದ್ದಾರೆ. ಪಾವಗಡದ ಘಟನೆ ಬಗ್ಗೆ ಅವತ್ತೇ ಮುಂಜಾನೆ ನಾನು ಮಾನ್ಯ ರಾಜಶೇಖರರೆಡ್ಡಿ ಜೊತೆ ಮಾತನಾಡಿದೆ ಏನ್ರೀ ಆಂಧ್ರದಿಂದ ಎಲ್ಲಾ ಕಡೆಗೆ ಬರುತ್ತಾ ಇದ್ದಾರೆ ಎಂದು. ನಿಮಗೆ ಗೊತ್ತಿರಬಹುದು. ಪಾವಗಡ, ಅನಂತರಪುರ ಜಿಲ್ಲೆ, ಪರಿಕರ್ ರವಿ ಹತ್ಯೆಯಾಯಿತು. ಅವರ ತಂದೆ ಕೂಡ ನಕ್ಸಲಿಯ ಚಟುವಟಿಕೆಯಲ್ಲಿದ್ದರು. ಎಲ್ಲಾ ಕಡೆ ಒಂದೊಂದಿದೆ ಅದರಲ್ಲಿ ರಾತ್ರಿಗೆ ಮಾಸ್ಕ್‌ನಲ್ಲಿ ಬಂದು ಅಮಾಯಕವಾಗಿ ಆಗಿದೆ. ಅದಾದಮೇಲೆ ಯಾವ ಒಂದು ಘಟನೆಯೂ ಆಗಿಲ್ಲ. ಅದು ಆಗಬಾರದು. ಪ್ರತಿಯೊಂದರಲ್ಲೂ ನಾವು ಸಶಕ್ತರಾಗಿರಬೇಕೆಂಬ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ಇವತ್ತು ಆಂಧ್ರ ಕರ್ನಾಟಕ ಬಾರ್ಡರ್ ಪ್ರದೇಶಕ್ಕೆ ಪೋಲಿಸ್ ಇಲಾಖೆಗೆ ಹೆಚ್ಚಿನ ಸಿಬ್ಬಂದಿ ಕೊಡುವ ರೀತಿಯಲ್ಲಿ ಎಲ್ಲಾ ಕಡೆಗೆ ನಾವು ವ್ಯವಸ್ಥೆ ಮಾಡಿದ್ದೇವೆ. ಪ್ರತಿಯೊಂದು ಹಂತದಲ್ಲಿ ಸರ್ಕಾರ ಇದರ ಬಗ್ಗೆ ವಿಚಾರ ಮಾಡುತ್ತದೆ. ಇದರ ಬಗ್ಗೆ ಹೆಚ್ಚಿನ ಕಾಳಜಿವಹಿಸಿ ನಾವು ಕೆಲಸ ಕಾರ್ಯಗಳು ಮಾಡುತ್ತಾ ಇದ್ದೇವೆ. ಕರ್ನಾಟಕ ರಾಜ್ಯದಲ್ಲಿ ಈ ಚಟುವಟಿಕೆಗಳು ಹೆಚ್ಚಿನ ರೀತಿಯಲ್ಲಿ ಬೆಳೆಯಲು ಅವಕಾಶ ಇಲ್ಲ. We have taken all the precautions. ಮತ್ತು ದಟ್ಟ ಅರಣ್ಯದಲ್ಲಿ ಯಾವ ರೀತಿಯಾಗಿ ನಾವು ಇವತ್ತು ಮಾಡಿದ್ದೇವೆ, ಮತ್ತು ಸಂರಕ್ಷಣೆ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಚಿಕ್ಕಮಗಳೂರು ಘಟನೆಯ ಬಗ್ಗೆ ಹೇಳಿದ್ದಾರೆ. ನಾನು ಹೇಳಿದೆ, ಸಿಂಧ್ಯಾರವರು ಬರಲಿಲ್ಲ. ಪಂಚಾಯತ್ ರಾಜ್ ಚುನಾವಣೆಯನ್ನು ಯಶಸ್ವಿಯಾಗಿ ಮಾಡಿದೆವು. 85 ಸಾವಿರ ಜನರನ್ನು ಚುನಾಯಿಸಲು ಚುನಾವಣೆಯಾಯಿತು. ನಮ್ಮ ಸರ್ಕಾರ ಬಂದಮೇಲೆ ಒಂದು ಕೂಡ ಫೈರಿಂಗ್ ಆಗಲಿಲ್ಲ. ಸಿಂಧ್ಯಾರವರು ಗೃಹಸಚಿವರಾಗಿದ್ದಾಗ ಫೈರಿಂಗ್ ಆಗಿತ್ತೋ ಏನೋ ಗೊತ್ತಿಲ್ಲ. ಈಗ ಸಮ್ಮಿಶ್ರ ಸರ್ಕಾರದಲ್ಲಿ ಒಂದು ಫೈರಿಂಗ್ ಆಗಲಿಲ್ಲ. ಮತ್ತೆ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಒಳ್ಳೆಯ ದಕ್ಷರಾದ ಜಿಲ್ಲಾಧಿಕಾರಿಗಳು. I have to run the administration. ಆಡಳಿತವನ್ನು ನಡೆಸಬೇಕಾಗಿದೆ. ಉತ್ತಮ ಜಿಲ್ಲಾಧಿಕಾರಿಗಳು ಸಿಗುವುದೇ ಬಹಳ ಕಷ್ಟ ಕಮಿಟ್‌ಮೆಂಟ್ ಇರತಕ್ಕಂಥವರು. ಸಿಕ್ಕಿದರೆ ಅದನ್ನು ನಾವು ಪ್ರಶಂಸೆ ಮಾಡಬೇಕಾಗುತ್ತದೆ. ಬಾಬಾ ಬುಡನ್‌ಗಿರಿ ದತ್ತಪೀಠದ ಬಗ್ಗೆ ನಾವು ಎಷ್ಟು ಚೆನ್ನಾಗಿ ಮಾಡಿದ್ದೇವೆ. ದತ್ತಪೀಠಕ್ಕೆ ಹೋಗಲಿಕ್ಕೆ ನಾವು ಯಾರಿಗೂ ಕೂಡ ನಿರ್ಬಂಧವನ್ನು ಹಾಕಲಿಲ್ಲ. ಶೋಭಾ ಯಾತ್ರೆ ಬಗ್ಗೆ ಹೇಳಿದರು. ಶೋಭಾಯಾತ್ರೆಗೆ ಶ್ರೀ ಯಡಿಯೂರಪ್ಪನವರು ಹೋಗುತ್ತಿದ್ದರು. ಶ್ರೀ ರವಿಯವರು ಹೋಗುತ್ತಿದ್ದರು. ಶೋಭಾ ಯಾತ್ರೆಗೆ ಹೋಗಬೇಡಿ, ಅದರಿಂದ ಎಲ್ಲಾ ಕಡೆಗೆ ಒಂದು ಕೆಟ್ಟ ವಾತಾವರಣ ಬರುತ್ತದೆಂದು ಹೇಳಿದ್ದೆವು. ತಪ್ಪೇನಲ್ಲ. ರಾಜ್ಯದ ಹಿತದೃಷ್ಟಿಯಿಂದ ಹೇಳಿದ್ದೇವೆ, ಒಂದು ಕಡೆಯಾದರೆ ಎಲ್ಲಾ ಕಡೆಗೆ

ಆಗುತ್ತದೆ. ಇಡೀ ನಮ್ಮ ರಾಜ್ಯದಲ್ಲಿ ಎಲ್ಲಾದರೂ ಒಂದು ಕಡೆ ಗಲಭೆಯಾದರೆ ಇಡೀ ರಾಷ್ಟ್ರದಲ್ಲಿಯೇ ಹಬ್ಬುತ್ತದೆ. ಅದಕ್ಕೆ ನಾವು ಯಶಸ್ವಿಯಾಗಿ ಬಾಬಾಬುಡನ್ ಗಿರಿ ಸಮಸ್ಯೆಯನ್ನು ಬಗೆ ಹರಿಸಿದ್ದೇವೆ. He is also one of the best deputy commissioner ಆಗತಕ್ಕ ರೀತಿಯಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ. ನಾನು ಹೇಳಿದೆ, ಚಂದ್ರಬಾಬು ನಾಯ್ಡು ಅವರು ಇದ್ದಾಗ 148 ಮುನಿಸಿಪಾಲಿಟೀಸ್‌ಗಳಿಗೆ ಏನು ಮಾಡಿದರು ಎಂಬುದನ್ನು ಹೇಳುತ್ತೇವೆ. ಆಗ ನಾನು ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿ ಅವರ ಜೊತೆಗೆ ಮಾತುಕತೆಯಾಡಿದ್ದೇನೆ. ಹೈದರಾಬಾದನ್ನು ನೀವು ನೋಡಿದ್ದೀರಿ. ಅಲ್ಲಿ ಮದೀನಾ ಹೋಟೆಲ್ ಎಂದು ಇದೆ. ನಯಾಪುರ್ ಘಾಟಿದ ಮೇಲೆ ಅದು ಸಿಗುತ್ತದೆ. ಅದೆಲ್ಲಾ ಡಬೀರ್‌ಪುರ, ಚಾರ್ಮಿನಾರ್, ಇವೆಲ್ಲಾ ಕಡೆ ರೋಡುಗಳು ವೈಡನಿಂಗ್ ಆಗಿದೆ. ನೀವು ರಾಯಚೂರಿನಿಂದ ಹೈದರಾಬಾದ್‌ಗೆ ಹೋಗಬೇಕಾದರೆ ಮೆಹಬೂಬ್ ನಗರ ಸಿಟಿಯನ್ನು ನೋಡಿ. ಮೆಹಬೂಬ್ ನಗರ್ ಡಿಸ್ಟ್ರಿಕ್ಟ್. ಎಷ್ಟು ಚೆನ್ನಾಗಿ ವೈಡನಿಂಗ್ ಆಗಿದೆ. ಇವುಗಳನ್ನು ವೈಡನಿಂಗ್ ಮಾಡಬೇಕಾದರೆ ಕೆಲವು ಅಂಶಗಳನ್ನು ನೋಡಲೇ ಬೇಕಾಗುತ್ತದೆ. ಪರಿಹಾರ ವನ್ನು ಕೊಡುವುದು ಏನಿದೆ, ಅದು ಬೇರೆ. ಏಕೆಂದರೆ ಮಾನ್ಯ ಶಂಕರಮೂರ್ತಿಯವರು ಮಾತನಾಡು ತ್ತಿದ್ದರು, ಆಗ ನಾನು ವಿಧಾನಪರಿಷತ್ತಿನಲ್ಲಿದ್ದೆ. ಅಲ್ಲಿ ಒಳ್ಳೆಯ ಜಿಲ್ಲಾಧಿಕಾರಿಗಳಿದ್ದಾರೆ. ಎಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಅದನ್ನು ಪ್ರಶಂಸೆ ಮಾಡಲೇಬೇಕು. ಅವರು ಒಳ್ಳೆಯ ದಕ್ಷರಿದ್ದಾರೆ. ಅವರೂ ಕೂಡ ಫೋಟೊ ತೋರಿಸಿ ಹೇಳಿದರು, ಮತ್ತೆ ಈಶ್ವರಪ್ಪನವರೂ ಕೂಡ ಫೋಟೊ ತೋರಿಸಿದರು. ಆ ಫೋಟೊ ಬಗ್ಗೆ ನಾನು ಈಗಾಗಲೇ ಡೆವಲಪ್‌ಮೆಂಟ್ ಕಮೀಷನರ್‌ಗೆ ಹೇಳಿದ್ದೇನೆ. ಇದರ ಬಗ್ಗೆ ತನಿಖೆ ಮಾಡಿ ವರದಿಯನ್ನು ಕೊಡಿ ಎಂದು ಹೇಳಿದ್ದೇನೆ. ತನಿಖೆ ಏನೆಂದರೆ ಅಲ್ಲಿ ಒಂದು ಯೂತ್ ಡೆಲಿಗೇಷನ್ ಬಂದಿತ್ತು. ಮುಂಜಾನೆ ಇನಾಗ್ಯುರೇಷನನ್ನು ರವಿಯೇ ಮಾಡಿದ್ದಾರೆ. ಇನ್ನಾಗುರೇಟ್ ಮಾಡಿದಮೇಲೆ ಸಾಯಂಕಾಲ ಅವರೆಲ್ಲಾ ಯುವಕರು ಕುಣಿದಿದ್ದಾರೆ. ಇವರೂ ಅವರ ಜೊತೆ ಸೇರಿ ಕುಣಿಯುತ್ತಾರೆ ಎಂದು ಹೇಳಿದ್ದಾರೆ. ಆದರೂ ಕೂಡ ಇದನ್ನು ಈ ಒಂದು ಸದನದಲ್ಲಿ ಪ್ರಸ್ತಾಪ ಮಾಡಿದ ಕಾರಣ ಇದರ ಬಗ್ಗೆ ಕೂಡ ನಾವು ತನಿಖೆಯನ್ನು ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಎಲ್ಲಿಯಾದರೂ ತಪ್ಪಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ. ಒಳ್ಳೆಯ ಕೆಲಸ ಎಂದರೆ ಇಲ್ಲಿ ಎರಡು ಪಾರ್ಟಿ ಇದೆ. ಎಲ್ಲಿ ಕೆಲಸ ಮಾಡುತ್ತಾನೆ, ಅಲ್ಲಿ ಪ್ರಶಂಸೆ ಮಾಡುತ್ತೇವೆ. ಎಲ್ಲಿ ಏನಾದರೂ ಮಾಡಿ ಎಡವಿದ್ದರೆ ಅದರ ಬಗ್ಗೆ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಒಂದು ಮಾತನ್ನು ವಿರೋಧಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಇತರ ಬೇರೆ ಪಕ್ಷದ ನಾಯಕರುಗಳಿಗೆ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನಕ್ಸಲೀಯ ಹಾವಳಿಯಾಗಲಿ, ಕಾನೂನಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡಿದ್ದೇವೆ. ಜನ ಬಹಳ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಮಾನ್ಯ ನಾಗರಾಜ್‌ರವರು, ಸಿಂಧ್ಯಾರವರು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿದ್ದಾರೆ. ಬೆಂಗಳೂರಿನ ಅವಸ್ಥೆ ನೋಡಿದರೆ ಏನ್ರೀ? ನಾವೇ 1972 ರಲ್ಲಿ ಆರಿಸಿಬಂದಮೇಲೆ ಮೇ ನಲ್ಲಿ ನಾವು ರಗ್ ಹಾಕಿಕೊಂಡು ಮಲಗುತ್ತಿದ್ದೆವು. ಈಗ ಎಷ್ಟು ಸೆಖೆಯಾಗಿದೆ. ಮೊನ್ನೆ ನಿಮ್ಮ ಅನಂತ ಕುಮಾರ್ ಜಾರ್ಖಂಡ್‌ನಿಂದ ಬಂದರು. ಜಾರ್ಖಂಡ್‌ನಿಂದ ಬಂದ ಮೇಲೆ ಬೆಂಗಳೂರು ಸ್ವರ್ಗವಾಗಿ ಕಂಡಿತು ಎಂದು ಹೇಳುತ್ತಾರೆ. ಬೇರೆ ರಾಜ್ಯದಿಂದ ಬಂದ ಜನರಿಗೆ ಬೆಂಗಳೂರು ಸ್ವರ್ಗವಾಗಿದೆ ಬೆಂಗಳೂರಿನವರು

ಇಲ್ಲಿ ಹೆಚ್ಚಿನ ಸಂಖ್ಯೆ ಬೆಳೆದು ಈ ರೀತಿ ಗತಿ ಆಗಿ ಕೂತಿದೆ ಎನ್ನುತ್ತಾರೆ. ಆದರೂ ಕೂಡ ಕಂಪಾರಿಟೀವ್ ಆಗಿ ನಾವು ತುಲನೆಯನ್ನು ಮಾಡಿದಾಗ ಬೇರೆ ರಾಜ್ಯಗಳಿಂದ ಕೂಡ ಬೆಂಗಳೂರು ಫಾರ್ ಸೂಪರ್ ಬಹಳ ಹೆಚ್ಚಿನ ರೀತಿಯಲ್ಲಿ ಆಗಿದೆ. ಇವತ್ತೇನು ಒಂದು ವಾತಾವರಣ ಇದೆ ಕರ್ನಾಟಕ ರಾಜ್ಯದಲ್ಲಿ ಅದು ಬಹಳ ಚೆನ್ನಾಗಿದೆ. ನಾವು ರಾಜಕೀಯವಾಗಿ ಬೇರೆ ಬೇರೆ ಭಿನ್ನಾಭಿಪ್ರಾಯಗಳಿರಬಹುದು. ಚುನಾವಣೆಗೆ ಹೋದಾಗ ನಮ್ಮ ಪರಸ್ಪರ ವಿಚಾರಗಳನ್ನು ಪ್ರಸ್ತಾಪಮಾಡೋಣ. ರಾಜ್ಯದ ಗೌರವ, ಬೆಂಗಳೂರಿನ ಗೌರವ ಇಲ್ಲಿ ಶಾಂತಿ ಕಾಪಾಡತಕ್ಕ ರೀತಿಯಲ್ಲಿ ಒಂದಾಗಿ ಕೆಲಸ ಮಾಡೋಣ. ಅದಕ್ಕೆ ತಮ್ಮೆಲ್ಲರ ಸಹಕಾರ ಬೇಕು ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತು. ಬೆಂಗಳೂರು ಸ್ವರ್ಗ ಅಲ್ಲ, ಈಗ ನರಕವಾಗಿದೆ. ಕಳೆದ ಎರಡು ದಿವಸದಿಂದ ವಿಧಾನಮಂಡಲದ ಸುತ್ತಮುತ್ತ ಏನು ವಾತಾವರಣ ಇದೆ, ಯಾವ ಪರಿಸ್ಥಿತಿಯಲ್ಲಿ ನಾವು ಒಳಗಡೆ ಬರುತ್ತಿದ್ದೇವೆ, ಎನ್ನುವುದು ನಿಮಗೆಲ್ಲರಿಗೂ ಗೊತ್ತಿರುವಂಥ ಸಂಗತಿ. ಗುಜರಾತ್‌ಗೂ ಹೋಗೋಣ ಸಾರ್. ಚರ್ಚೆ ಮಾಡೋಣ. ಇದನ್ನು ಇನ್ನೊಂದು ಬಿಹಾರ್ ರೀತಿ ಮಾಡಬೇಕೆಂದರೆ ನನ್ನದೇನೂ ಅಭ್ಯಂತರವಿಲ್ಲ. ನನ್ನದೇನು ಎಂದರೆ ನಿಮ್ಮಿಂದ ಒಂದು ದಿವಸ ಪೂರ್ತಿ ನಮ್ಮೆಲ್ಲಾ ಕಲಾಪಗಳನ್ನು ಬದಿಗೊತ್ತಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎನ್ನುವ ಬಗ್ಗೆ ಯಾವ ಮಟ್ಟದ ಒಂದು ವಿಚಾರವನ್ನು ನಿಮ್ಮ ಮುಂದೆ ಇಟ್ಟು ಅದಕ್ಕೆ ಪರಿಹಾರವನ್ನು ಹುಡುಕುವಂಥ ಪ್ರಯತ್ನವನ್ನು ಮಾಡಿದೆವೋ ಅದಕ್ಕೆ ಯಾವುದೇ ಒಂದು ಸ್ಪಷ್ಟವಾದ ಉತ್ತರ ನಿಮ್ಮಿಂದ ಬಂದಿಲ್ಲ. ಲೈವ್‌ಬ್ಯಾಂಡನ್ನು ರದ್ದುಮಾಡುವ ಬಗ್ಗೆ, ಅದರ ಬಗ್ಗೆ ನಿಮ್ಮದೇನೂ ಇಲ್ಲ. ನಕ್ಸಲೈಟ್ಸ್ ಚಟುವಟಿಕೆ ಒಂದು ರೀತಿ ಅದನ್ನು ವೈಭವೀಕರಣ ಮಾಡಿ ಅದೇ ಸರಿ ಅನ್ನುವ ಅರ್ಥ ಬರುವ ರೀತಿಯಲ್ಲಿ ನೀವೇನಾದರೂ ಮಾತನಾಡಿಬಿಟ್ಟರೆ ಅದರ ಪರಿಣಾಮ ಏನಾಗಬಹುದು ಎನ್ನುವಂಥದ್ದು ಸಹ ನಮಗೆ ಇವತ್ತು ಅರ್ಥವಾಗಲಿಲ್ಲ. ನಿಮ್ಮ ಉತ್ತರವನ್ನು ಒಂದು ರೀತಿ ಜನರಲೈಜ್ ಮಾಡಿಬಿಟ್ಟು ಯಾವುದೇ ಇದರ ಬಗ್ಗೆ ಸೀರಿಯಸ್‌ನೆಸ್ ಇಲ್ಲದೆಯೇ ಎಲ್ಲಾ ನಮ್ಮ ರಾಜ್ಯ ಸುವ್ಯವಸ್ಥಿತವಾಗಿದೆ, ಶಾಂತವಾಗಿದೆ ಎನ್ನುವ ರೀತಿಯಲ್ಲಿ ತಾವು ಉತ್ತರವನ್ನು ಕೊಡುವಂಥ ಪ್ರಯತ್ನವನ್ನು ಮಾಡಿದ್ದೀರಿ ಬಹುಶಃ ನಿಮ್ಮ ಇವತ್ತಿನ ಉತ್ತರ ಸರಿಯಿಲ್ಲ ಎಂದು ನಿಮಗೇ ಮನವರಿಕೆಯಾಗುತ್ತದೆ. ಏಕೆಂದರೆ ಒಬ್ಬ ರಾಜ್ಯದ ಮುಖ್ಯಮಂತ್ರಿಗಳಾಗಿ ಗೃಹಸಚಿವರಾಗಿ ಇಲಾಖೆಯನ್ನು ನೋಡಿಕೊಳ್ಳತಕ್ಕಂಥವರು ಇವತ್ತು ಈ ರೀತಿ ಮಾತನಾಡುವಂಥದ್ದು ಅಥವಾ ವರವರರಾವ್ ಗದ್ದರ್ ಬಗ್ಗೆ ಸ್ಪಷ್ಟವಾದ ಒಂದು ನಿಲುವನ್ನು ತೆಗೆದುಕೊಳ್ಳದೇ ಇರುವಂಥದ್ದು ಮತ್ತು ಯಾರು ಈ ನಕ್ಸಲೈಟ್ಸ್ ಬಗ್ಗೆ ಕೈಜೋಡಿಸುತ್ತಿದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಳುತ್ತೇವೆ ಎನ್ನುವಂಥದ್ದು ಮತ್ತು ಪೋಲೀಸ್ ಬಂದೋಬಸ್ತನ್ನು ಮಾಡುತ್ತೇವೆ, ಆಧುನಿಕ ಶಸ್ತ್ರಾಸ್ತ್ರವನ್ನು ಕೊಡುತ್ತೇವೆ, ಬಿಗಿ ಮಾಡುತ್ತೇವೆ ಎಂಬ ಬಗ್ಗೆ ಸ್ಪಷ್ಟವಾದ ಉತ್ತರ ನಿಮ್ಮಿಂದ ಬರಲಿಲ್ಲ. ನಾನು ಗ್ರಾಮಪಂಚಾಯಿತಿ ಚುನಾವಣೆಯನ್ನು ಮಾಡಿದೆ ಯಡಿಯೂರಪ್ಪನವರೇ, 85 ಸಾವಿರ ಜನರು ಆಯ್ಕೆಯಾದರು ಒಂದು ಕೊಲೆಯಾಗಲಿಲ್ಲ. ಒಂದು ಸುಲಿಗೆಯಾಗಲಿಲ್ಲ. ಬಂದೂಕವನ್ನು ಉಪಯೋಗ ಮಾಡಲಿಲ್ಲ. ಈ ರೀತಿ ಒಂದು ಫೈರಿಂಗನ್ನು ನಾವು ಮಾಡಲಿಲ್ಲ, ಈ ರೀತಿ ನೀವು ನಿಮ್ಮ ಭುಜವನ್ನು ತಟ್ಟಿಕೊಳ್ಳುವ ಪ್ರಯತ್ನವನ್ನೇನು ಮಾಡಿದ್ದೀರಿ, ಇದರಿಂದ

ಬಹುಶಃ ಈ ರಾಜ್ಯವನ್ನು ಶಾಂತಿ ಸುವ್ಯವಸ್ಥೆ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ನಿಮಗೆ ಇಚ್ಚೆಇಲ್ಲವೆಂದು ಕಾಣುತ್ತದೆ. ರಾಜ್ಯ ಸರ್ಕಾರದ ಮೊದಲನೇ ಕರ್ತವ್ಯ ಈ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಸರಿ ಮಾಡುವಂಥದ್ದು. ಆ ಕರ್ತವ್ಯವನ್ನು ಮಾಡದೇ ಉಳಿದೆಲ್ಲಾ ಉತ್ತರ ಕೊಡುವಂಥ ಪ್ರಯತ್ನನವನ್ನು ಮಾಡಿದ್ದೀರಿ. ಬಹಶಃ ನಿಮ್ಮ ಉತ್ತರ ನಮಗೆ ಯಾವುದೇ ರೀತಿ ಯಾರಿಗೂ ಸಮಾಧಾನವಾಗಿಲ್ಲ. ಗೊತ್ತಿಲ್ಲ, ನಮ್ಮ ಮಿಡಿಯಾ ಸ್ನೇಹಿತರು ನಾಳೆ ಈ ರೀತಿ ನೀವು ಉತ್ತರ ಕೊಟ್ಟದ್ದನ್ನು ಕಳೆದ ಅನೇಕ ದಿನಗಳಿಂದ ಯಾವ ರೀತಿ ಅವರು ತೆಗೆದುಕೊಳ್ಳುತ್ತಾರೋ ನೋಡೋಣ. ನೀವು ಹೇಳಿದರಲ್ಲಾ, ರಾಜ್ಯದ ಜನರು ನಮ್ಮನ್ನು ಬಹಳ ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡಿದ್ದಾರೆ ಯಡಿಯೂರಪ್ಪನವರೇ ಎಂದರೆ ಬಹುಶಃ ಇದೇ ಸುಧಾರಣೆ ಎಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ ನಾವು ಮತ್ತೆ ನಿಮ್ಮನ್ನು ಕ್ಲಾರಿಫಿಕೇಷನ್ ಕೇಳುವುದು, ಪ್ರಶ್ನೆ ಕೇಳುವುದು, ಇದರಿಂದ ಏನೂ ಉಪಯೋಗವಾಗುತ್ತೆ ಎಂದು ನನಗೇನೂ ಅನಿಸುವುದಿಲ್ಲ. ಮತ್ತೆ ನಿಮಗೆ ಆ ಕಳಕಳಿಯೂ ಸಹ ಆ ಒಂದು ಶಬ್ದ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದನ್ನು ಸರಿಪಡಿಸಬೇಕು ಎನ್ನುವ ಯಾವುದೂ ನಿಮಗೆ ಕಾಣುತ್ತಿಲ್ಲ ಎನ್ನುವುದು ಸ್ಪಷ್ಟವಾಗಿ ನಿಮ್ಮ ಉತ್ತರದಿಂದ ಗೊತ್ತಾಗಿದೆ. ನಿಮ್ಮ ಉತ್ತರದಿಂದ ನಮಗ್ಯಾರಿಗೂ ತೃಪ್ತಿಯಾಗಿಲ್ಲ. ಅಷ್ಟೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ವೆಂಕಟಮ್ಮನಹಳ್ಳಿ ಸಮಸ್ಯೆ ಬಗ್ಗೆ ಮಾತನಾಡಬೇಕಾದರೆ ಅಲ್ಲಿರುವ ಎರಡು–ಮೂರು ಮೂಲಭೂತ ಸಮಸ್ಯೆಗಳ ಬಗ್ಗೆ ಮಾತನಾಡಿದೆ. ಅವರ ಜಮೀನು ಆಂಧ್ರದಲ್ಲಿದೆ, ಮನೆ ಕರ್ನಾಟಕದಲ್ಲಿದೆ, ಅವರಿಗೆ ಪಾಪ ಸಾಲ ತೆಗೆದುಕೊಳ್ಳುವುದಕ್ಕೂ ಆಗುತ್ತಿಲ್ಲ ಎಂಬುದನ್ನು ಗಮನಕ್ಕೆ ತಂದೆ. ಮುಖ್ಯಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಅಲ್ಲಿ ಪೋಲೀಸರಿಗೆ ಯಾವುದೇ ಅನುಕೂಲಗಳನ್ನು ನೀವು ಕೊಟ್ಟಿಲ್ಲ. ಇವತ್ತೂ ಕೂಡ ಅದೇ ಸ್ಥಿತಿಯಲ್ಲಿದ್ದಾರೆ. ಅವರಿಗೇನಾದರೂ ಮಾಡಬೇಕಾಗಿತ್ತು ಎಂದು ಹೇಳಿದ್ದೆ. ಮತ್ತೆ ಬೆಂಗಳೂರಿನ ಬಗ್ಗೆ ನಾನು ಮಾತನಾಡಬೇಕಾದರೆ ಅನೇಕ ಮಾಹಿತಿಗಳನ್ನು ಕೊಡುತ್ತಾ ಹೇಳಿದೆ. ಪೋಲೀಸರನ್ನು ನೀವು ಸಶಸ್ತ್ರಧಾರಿಗಳನ್ನೇನು ಮಾಡಿದ್ದೀರಿ, ಅವರನ್ನು ಈಗಿನ ಕಾಲಕ್ಕೆ ಕರೆದುಕೊಂಡು ಬನ್ನಿ ಎಂದು ಹೇಳಿದ್ದೆ. ಜೊತೆಗೆ ವೆಂಕಟಮ್ಮನಹಳ್ಳಿ ಬಗ್ಗೆ ಸರ್ಕಾರದ ವತಿಯಿಂದ ಒಬ್ಬರೇ ಒಬ್ಬರು ಮಂತ್ರಿ ಹೋಗಿಲ್ಲ, ನೋಡಲಿಲ್ಲ, ಅಲ್ಲಿನ ಜನರನ್ನು ಸಂತೈಸಲಿಲ್ಲ. ಸತ್ತುಹೋದ ಪೋಲೀಸ್ ಕುಟುಂಬದವರಿಗೂ ಒಂದು ಸಮಾಧಾನದ ಮಾತನ್ನು ಆಡಿಲ್ಲ ಎಂದು ನಾನು ಕೇಳಿದೆ. ಇದು ಯಾವುದರ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ. ನಮಗೆ ಗೊತ್ತು. ಅವರು ನಿನ್ನೆ ಎರಡು ಕಿವಿಯನ್ನು ಕಳೆದುಕೊಂಡು ಬಿಟ್ಟಿದ್ದರು. ಆ ಕಡೆ ಈ ಕಡೆ ನಿಂತುಕೊಂಡು ಮಾತನಾಡುವಾಗಲೇ ನಾನು ಹೇಳಿದೆ. ಅವರಿಗೆ 4 ಕಿವಿ ಅಥವಾ 8 ಕಿವಿ ಇಲ್ಲ ಎಂದು ಹೇಳಿ. ಬರೆದುಕೊಂಡಿರುತ್ತಾರೆ ಎಂದು ತಿಳಿದುಕೊಂಡಿದ್ದೆ. ಕನಿಷ್ಟ ಒಂದು ಸದನದ ಸಮಿತಿಯನ್ನು ಮಾಡಿ ಅಲ್ಲಿಗೆ ಹೋಗಿ ಏನು ನಡೆಯಿತು, ಏಕೆ ನಡೆಯಿತು ಅಂತಲಾದರೂ ಒಂದು ಮಾಹಿತಿಯನ್ನು ತರಿಸಿಕೊಳ್ಳುವಷ್ಟೇನಾದರೂ ಸೌಜನ್ಯದ ಒಂದು ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಈಗಲಾದರೂ ಹೇಳುತ್ತಾರಾ ಎಂದು ನಾನು ತಮ್ಮೂಲಕ ಕೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಎರಡು ವಿಚಾರಗಳನ್ನು ಪ್ರಸ್ತಾಪಮಾಡಿದರು. ಸಮಗ್ರ ಪೋಲೀಸ್ ಇಲಾಖೆಯನ್ನು ಪುನರ್ ನಿರ್ಮಾಣ

ಮಾಡಬೇಕೆನ್ನುವ ಬಗ್ಗೆ ನಾನು ಮಾತನಾಡಿದೆ. ಯಾವುದೋ ಒಂದು ಹಳೆಯ ಕಾಲದಲ್ಲಿ ಇದ್ದಂಥದ್ದು ಇದೆ. ಅದಕ್ಕೇನು ವ್ಯವಸ್ಥೆ ಬೇಕು, ಅದಕ್ಕೆ ವಿಶೇಷವಾದ ಗಮನವನ್ನು ಕೊಡಬೇಕೆನ್ನುವುದು ಒಂದು. ಮತ್ತು ಪೋಲೀಸರಲ್ಲೇ ಅಸಮಾಧಾನ ಇದೆ. ಪೋಲೀಸ್ ಇಲಾಖೆಯಲ್ಲಿ 20–25 ವರ್ಷದಿಂದ ಬಡ್ತಿ ಸಿಕ್ಕಿಲ್ಲವೆಂದು ಅವರಲ್ಲಿಯೇ ಅಸಮಾಧಾನ ಇರತಕ್ಕದ್ದು. ಇವುಗಳು ಪೋಲೀಸ್ ಇಲಾಖೆಯಲ್ಲಿ ಬಹಳ ಪ್ರಾಮುಖ್ಯವಾಗಿ ಇರತಕ್ಕದ್ದು. ಈ ಬಗ್ಗೆ ತಾವು ಧರ್ಮವೀರ ಸಮಿತಿಯ ವರದಿಯನ್ನು ತರಿಸಿಕೊಂಡಿದ್ದೀರಿ. ತಾವು ಯಾವ ರೀತಿ ಹೊಸ ವಿಧಾನದಲ್ಲಿ ಬಿಲ್ಡಪ್ ಮಾಡಬೇಕು? ಪೋಲೀಸ್ ಇಲಾಖೆಯನ್ನು, ಪೋಲೀಸ್ ಸ್ಟೇಷನ್‌ಗಳನ್ನು ಯಾವ ರೀತಿ ಬಿಲ್ಡಪ್ ಮಾಡಬೇಕು? ತಾವೇ ಹೇಳಿದ್ದೀರಿ ಬೆಂಗಳೂರಿನ ಜನಸಂಖ್ಯೆ ಇವತ್ತು 85 ಲಕ್ಷ ಇದೆ ಎಂದು ಹೇಳಿದ್ದೀರಿ. 85 ಲಕ್ಷಕ್ಕೆ ತಕ್ಕಂತೆ ಇಲ್ಲಿ ಪೋಲೀಸ್ ವ್ಯವಸ್ಥೆ ಇಲ್ಲ. ಮತ್ತೆ 85 ಲಕ್ಷ ಜನ ಬೆಂಗಳೂರು ನಗರಕ್ಕೆ ಬಂದಿದ್ದಾರೆ. ಇವರು ಯಾರ್‍ಯಾರು ಬಂದಿದ್ದಾರೆ? ಹೇಗೆ ಬಂದಿದ್ದಾರೆ? ನಾನು ಮಾತನಾಡುವಾಗ ಹೇಳಿದೆ. ಕೋಣನಕುಂಟೆಯಲ್ಲಿ ಶಿವರಾಸನ್ ಬಂದು ಎರಡೂವರೆ ತಿಂಗಳಾದರೂ ನಮಗ್ಯಾರಿಗೂ ಗೊತ್ತಿರಲಿಲ್ಲ. ಎರಡೂವರೆ ತಿಂಗಳಾದ ಮೇಲೆ ಶಿವರಾಸನ್ ಬಂದಿದ್ದು ಗೊತ್ತಾಯಿತು. ಪೋಲೀಸ್‌ನವರು ಈ ರಾಜ್ಯಕ್ಕೆ ಯಾರ್‍ಯಾರು ಬರುತ್ತಿದ್ದಾರೆ? ಹೇಗೆ ಬರುತ್ತಿದ್ದಾರೆ ಎನ್ನತಕ್ಕ ವ್ಯವಸ್ಥೆ, ಮಾಹಿತಿ ಪಡೆಯತಕ್ಕದ್ದು ಇಲ್ಲ. ದಿನಾ ಬೆಂಗಳೂರು ಬೆಳೆಯುತ್ತಿದೆ. ತಾವು ಹೇಳಿದಿರಿ. ಮೊನ್ನೆ ಒಂದು ಸಣ್ಣ ಹುಡುಗಿಯನ್ನು ಅಪಹರಣ ಮಾಡಿಕೊಂಡು ಹೋಗಿ ಕೊಂದಿದ್ದಾರೆ. ಇದು ನಿಜವಾಗಿಯೂ ಕರುಳು ಮರುಗತಕ್ಕ ಪರಿಸ್ಥಿತಿ. ಇಂತಹ ಪರಿಸ್ಥಿತಿ ಬೆಂಗಳೂರು ನಗರದಲ್ಲಿ ಇರುವ ಈ ಸಂದರ್ಭದಲ್ಲಿ, ಬೆಂಗಳೂರು ನಗರದಲ್ಲಿಯೇ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ, 85 ಲಕ್ಷ ಜನಸಂಖ್ಯೆ ಆದರೆ, ಇನ್ನು ಸ್ವಲ್ಪ ದಿವಸ ಆದರೆ ಬಾಂಬೆ, ದೆಹಲಿಯನ್ನು ಮೀರಿಸುತ್ತದೆ ಎಂದು ತಾವೇ ಹೇಳುತ್ತಿದ್ದೀರಿ. ಒಂದು ಕೋಟಿ ಆಗುತ್ತದೆ. ಇದೇ ರಾಜ್ಯದ ರಾಜಧಾನಿ ರಾಜ್ಯ ಆಗುತ್ತದೆ. ಅಂದರೆ ಇದಕ್ಕೆ ವಿಶೇಷವಾದಂತಹ ಪೋಲೀಸ್ ವ್ಯವಸ್ಥೆ, ಪೋಲೀಸ್‌ನ ಭದ್ರತೆ ಇವೆಲ್ಲವನ್ನೂ ನಾವು ಮಾಡಬೇಕಾಗುತ್ತದೆ. ಇವೆಲ್ಲಕ್ಕೂ ಕಾರಣ 1956ರಿಂದ ಇಲ್ಲಿಯವರೆಗೆ ಎರಡು ಕೋಟಿ ಜನ ಹೊರಗಡೆಯಿಂದ ವಲಸೆ ಬಂದಿದ್ದಾರೆ. ಬಹುಶಃ ಬೆಂಗಳೂರಿನಲ್ಲಿ ಹೊರಗಡೆಯಿಂದ ಬಂದಿರತಕ್ಕ ಜನರಿಂದಲೇ ಈ ಕೃತ್ಯಗಳು ನಡೆಯುತ್ತಿರುವುದು ಭಯೋತ್ಪಾದನೆ, ಭೂಧಾಳಿ, ಏನೇನು ಈ ಎಲ್ಲಾ ಕ್ರೈಮ್‌ಗಳು ನಡೆಯುತ್ತಿವೆ? ಇವೆಲ್ಲವೂ ಸಂಪೂರ್ಣವಾಗಿ ಹೊರಗಡೆಯಿಂದ ಬಂದಿರತಕ್ಕಂಥವರಿಂದ ನಡೆಯುತ್ತಿದೆ. ಇದರ ಬಗ್ಗೆ ಒಂದು ಮಾಹಿತಿಯನ್ನು ಸಮಗ್ರವಾಗಿ ಕೊಡತಕ್ಕಂಥದು ಆಗಬೇಕು. ಬೆಂಗಳೂರಿನಲ್ಲಿ ಬದುಕುವುದೇ ಕಷ್ಟ ಎಂಬ ಪರಿಸ್ಥಿತಿ ನಿರ್ಮಾಣ ಆಗಿದೆ, ಆದ್ದರಿಂದ ಇದನ್ನು ತಾವು ಸ್ಪಷ್ಟವಾಗಿ ಹೇಳಬೇಕು. ಇದೊಂದು ವಿಚಾರ. ಮತ್ತೆ ಎರಡನೇ ವಿಚಾರ ಎಂದರೆ ಈ ಪಾವಗಡದಲ್ಲಿ ಸತ್ತ ಬಗ್ಗೆ ಮತ್ತು ನಕ್ಸಲೈಟ್ ವಿಚಾರ. ಇವೆರಡರ ಬಗ್ಗೆಯೂ ಸಹ ತಾವು ಒಂದು ನ್ಯಾಯಾಂಗ ತನಿಖೆ ಮಾಡಬೇಕು. ತಪ್ಪೇನಿದೆ? ಈಗ ನೀವು ಹೇಳುವ ಪ್ರಕಾರ ನಮ್ಮದೇನೂ ಆಗಿಲ್ಲ ಎನ್ನುತ್ತೀರಿ. ಒಂದು ನ್ಯಾಯಾಂಗ ತನಿಖೆ ಮಾಡಿ. ಸಮಗ್ರವಾಗಿ ಅದರಿಂದ ಹೊರಗಡೆ ಬರತಕ್ಕಂಥ ತೀರ್ಪು ಏನು ಇದೆ, ಅದಕ್ಕೆ ನಾವೆಲ್ಲಾ ಭಾಗಿ ಆಗೋಣ. ಅದನ್ನು ಮಾಡತಕ್ಕಂಥದ್ದು. ಮತ್ತು ಎಸ್‌ಟಿಎಫ್‌ನವರನ್ನು ಅಲ್ಲಿ ಹಾಕಬೇಕು ಎಂಬ ಉದ್ದೇಶ ಇತ್ತಲ್ಲಾ ಮತ್ತು ನಿಮ್ಮದೇ ಒಂದು ಪಡೆ, ನೀವು ತಕ್ಷಣ ವಿಶೇಷವಾದಂತಹ ಒಂದು ಪಡೆ ಮಾಡಿದ್ದೀರಿ.

ಯಾವ ಪಡೆ ಏನು ಎಂಬ ಬಗ್ಗೆ ತಾವು ಹೇಳಲಿಲ್ಲ–ಎನ್ನತಕ್ಕಂಥದ್ದು ನಮ್ಮ ಭಾವನೆ ಇದೆ. ದಯಮಾಡಿ ತಾವು ಅದರ ಬಗ್ಗೆ ಸವಿಸ್ತಾರವಾಗಿ ಹೇಳಬೇಕು ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಬಹಳ ಪ್ರಮುಖವಾದಂತಹ 2–3 ವಿಚಾರಗಳನ್ನು ಪ್ರಸ್ತಾಪ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಗಮನ ಕೊಡಿ, ಗಮನ ಕೊಡಿ ಎಂದು ಹೇಳಿದ್ದೆ. ಅವರು ಗಮನ ಕೊಡಲಿಲ್ಲ. ಈಗ ಉತ್ತರದಲ್ಲೂ ಇಲ್ಲ. ಒಂದು ಪ್ಯಾಕೇಜನ್ನು ಅನೌನ್ಸ್ ಮಾನ್ಯ ಮುಖ್ಯಮಂತ್ರಿಗಳು ಮಾಡಿದರು. ನಕ್ಸಲೀಯ ಪ್ರದೇಶಗಳಲ್ಲಿರತಕ್ಕ ಸಮಸ್ಯೆ ಪರಿಹಾರ ಮಾಡಲಿಕ್ಕೆ ಪ್ಯಾಕೇಜ್ ಅನೌನ್ಸ್ ಮಾಡಿದರು. ಆ ಪ್ಯಾಕೇಜ್ ಬಗ್ಗೆ ನಾನು ಮಾತನಾಡುತ್ತಾ ಹೇಳಿದೆ. ಅಲ್ಲಿ ಮೂಲಭೂತವಾಗಿ ಆ ಬುಡಕಟ್ಟಿನ ಜನಾಂಗವನ್ನು , ಅವರು ನಕ್ಸಲೀಯರು ಎಂದು ಹೇಳಿಕೊಳ್ಳತಕ್ಕಂಥವರು ಸಂಘಟನೆ ಮಾಡಿದ್ದೇ ಆ ಭೂಮಿ ಪ್ರಶ್ನೆ ಆಧಾರದ ಮೇಲೆ. ಒಂದು ಒಕ್ಕಲು ಎಬ್ಬಿಸುವುದು ಮತ್ತು ಉಳುಮೆ ಮಾಡುವವರಿಗೆ ಭೂಮಿ ಕೊಡಬೇಕು ಎನ್ನತಕ್ಕ ಪ್ರಶ್ನೆಯ ಆಧಾರದ ಮೇಲೆಯೇ ಆ ಮುಗ್ಧ ಜನರನ್ನೆಲ್ಲಾ ಅವರು ಸಂಘಟನೆ ಮಾಡಿರತಕ್ಕದ್ದು. ಆ ಭೂಮಿ ಹಂಚಿಕೆಯ ಪ್ರಶ್ನೆ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಭೂಮಿ ಹಂಚಬೇಕು ಮತ್ತು ಒಕ್ಕಲು ಎಬ್ಬಿಸತಕ್ಕ ಕೆಲಸವನ್ನು ನಿಲ್ಲಿಸಬೇಕು ಎಂದು ಹೇಳತಕ್ಕ ಕೆಲಸವನ್ನು ಮಾಡಬೇಕು ಎಂದು ಹೇಳಿ ನಾನು ಪ್ರಸ್ತಾಪ ಮಾಡಿದ್ದೆ. ಆದರೆ ಈಗ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಹೇಳಲಿಲ್ಲ. ಇದೊಂದು. ಎರಡನೆಯದು ವಿಶ್ವವಿದ್ಯಾನಿಲಯಗಳಲ್ಲಿ ಪ್ರೊಫೆಸರ್‌ಗಳು ಇದ್ದಾರೆ ಎಂದು ಹೇಳಿದರು. ಅದಕ್ಕೆ ನಾನು ಭಾರೀಕ್ಲಿಯರ್ ಆಗಿ ಹೇಳಿದ್ದೇನೆ. ನಾವು ಡೆಮಾಕ್ರಸಿಯಲ್ಲಿದ್ದೇವೆ. Everybody is having a right to hold and conviction towards any idealogy. ಅದನ್ನು ಎಲ್ಲೂ ಬ್ಯಾನ್ ಮಾಡಿಲ್ಲ. ಮತ್ತು ಅವರದೇ ಆದಂತಹ ಅಭಿಪ್ರಾಯವನ್ನು ಹೊಂದಲಿಕ್ಕೆ ಹಕ್ಕು ಇದೆ. ಅವರು ಪ್ರೊಫೆಸರ್ ಆದ ತಕ್ಷಣ ಅವರು ಹಕ್ಕನ್ನು ಕಳೆದುಕೊಳ್ಳುವುದಿಲ್ಲ. ಆದರೆ ಅವರು ಯಾವ ಐಡಿಯಾಲಜಿಗೆ ಕನ್ – ವಿಕ್ಷನ್ ಆಗಿದ್ದಾರೋ, ಆ ಐಡಿಯಾಲಜಿ ಮುಖಾಂತರ ಕಾರಣದಿಂದಾಗಿ ಯಾರಾದರೂ ಪ್ರಾಣಹಾನಿ, ಆಸ್ತಿ ನಷ್ಟ ಮಾಡಿದರೆ ಮಾತ್ರ ಅದು ಅಪರಾಧ ಆಗುತ್ತದೆಯೇ ಹೊರತು ಯಾರೋ ಒಬ್ಬರು ಒಂದು ಐಡಿಯಾಲಜಿಗೆ ಕನ್‌ವಿಕ್ಷನ್ ಇದ್ದಾರೆ ಎನ್ನುವ ಕಾರಣಕ್ಕೋಸ್ಕರ ಅವರನ್ನು ಅಪರಾಧಿಗಳು ಎಂದು ಟ್ರೀಟ್ ಮಾಡತಕ್ಕಂಥದ್ದು. ಇನ್‌ಡಿಸ್ಕ್ರಿಮಿನೇಟ್ ಆಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಆಗಬಾರದು ಎಂದು ಹೇಳತಕ್ಕಂಥ ವಿಚಾರವನ್ನು ನಾನು ಹೇಳಿದೆ. ಅದಕ್ಕೂ ತಾವು ಉತ್ತರವನ್ನು ಹೇಳಲಿಲ್ಲ. ಮೂರನೆಯದು ನಾನು ಹೇಳಿದ್ದು ಇಂಟಲಿಜೆನ್ಸಿ ಸಂಪೂರ್ಣ ಫೇಲ್ಯೂರ್ ರಾಜ್ಯದಲ್ಲಿ ಆಗಿದೆ. ಇವತ್ತಿನದ್ದು ಅಲ್ಲ. ಶಿವರಾಸನ್‌ನಿಂದ ಅಲ್ಲ. ನೀವೇ ಹೇಳಿದಿರಿ. ಬೋರ್ಕರ್‌ರವರಿಗೆ ಫೋನ್ ಮಾಡಿ ನಾನೇನೋ ತಮ್ಮ ಹತ್ತಿರ ಒಂದು ವಿಚಾರಕ್ಕೆ ಬಂದಿದ್ದಾಗ ಎತಿಯೂರು ಹತ್ತಿರ ಯಾವುದೋ ಒಂದು ಹಳ್ಳಿಯಲ್ಲಿ ಗಲಾಟೆ ಆಗಿದೆ, ನೋಡಿ ಎಂದು ತಾವೇ ಹೇಳಿದಿರಿ. ಹಾಗೆ ತಾವೇ ಹೇಳಿದಾಗ ಆ ಹಳ್ಳಿ ಎಲ್ಲಿದೆ ಎಂದು ಹೇಳಿ ನಿಮ್ಮ ಡಿಜಿ ನಿಮ್ಮನ್ನೇ ಕೇಳುತ್ತಾರೆ. ಆ ಹಳ್ಳಿ ಎಲ್ಲಿ ಎಂದು ಹೇಳಿ ಆ ಡಿಜಿ ನಿಮ್ಮನ್ನೇ ಕೇಳುತ್ತಾರೆ. What for he is there? He is the Chief for maintaining law and order and knowing the places. ಮಾನ್ಯ ಮುಖ್ಯಮಂತ್ರಿಗಳನ್ನೇ ಆ ಹಳ್ಳಿ ಎಲ್ಲಿದೆ ಎಂದು ಕೇಳಿದರೆ what is this? ಈ

ತರಹದ ಸ್ಥಿತಿಯಲ್ಲಿ ಇಂಟೆಲಿಜೆನ್ಸಿ ಫೇಲ್ಯೂರ್ ಆಗಿದೆ. ಇಂಟೆಲಿಜೆನ್ಸ್ ಫೇಲ್ಯೂರ್‌ನಿಂದಲೇ ಎಲ್ಲಾ ತರಹದ ಅನಾಹುತಗಳು ಈ ರಾಜ್ಯದಲ್ಲಿ ನಡೆಯುತ್ತಿರತಕ್ಕಂಥದ್ದು ಎಂದು ನಾವು ಹೇಳಿದೆವು. ಆ ಇಂಟೆಲಿಜೆನ್ಸ್ ಫೇಲ್ಯೂರ್‌ಗೆ ಕಾರಣವೇನು ಎನ್ನತಕ್ಕದ್ದನ್ನು ತಾವು ತಮ್ಮ ಉತ್ತರದಲ್ಲಿ ಹೇಳಲಿಲ್ಲ. ಮತ್ತೆ ಬಹಳ ಪ್ರಮುಖವಾಗಿ ಅದೊಂದು ವಿಷಯ ಪ್ರಸ್ತಾಪ ಮಾಡಿದಿರಿ. ಸೋಷಿಯೋ ಎಕನಾಮಿಕ್ ಪ್ರಾಬ್ಲಮ್ ಎಂದು ಹೇಳಿದಿರಿ. ಕರೆಕ್ಟ್ ಅದನ್ನು ನಾವು ಒಪ್ಪುತ್ತೇವೆ. ಆದರೆ ಆ ಸೋಷಿಯೋ-ಎಕನಾಮಿಕ್ ಪ್ರಾಬ್ಲಮ್ ಬಂದಂತಹ ಸಂದರ್ಭದಲ್ಲಿ ನಮಗೆ ಯಾವ ರೀತಿಯಲ್ಲಿ ನಿಗ್ರಹಿಸಬೇಕು? ಅದಕ್ಕೆ ಏನು ಕಾರ್ಯಕ್ರಮ ಹಾಕಿದ್ದೀರಿ? ಆ ಕಾರ್ಯಕ್ರಮವನ್ನು ಹಾಕದೇ ಬರೇ ಸೋಷಿಯೋ-ಎಕನಾಮಿಕ್ ಪ್ರಾಬ್ಲಮ್ ಎಂದು ಹೇಳಿ ಬಿಟ್ಟರೆ ಅದು ಆಗುವುದಿಲ್ಲ. ಅದಕ್ಕೆ ನಿರ್ದಿಷ್ಟವಾದಂತಹ ಕಾರ್ಯಕ್ರಮ ಹಾಕಬೇಕು. ಮತ್ತು ವೆಂಕಟಮ್ಮನಹಳ್ಳಿ ಪ್ರಕರಣಕ್ಕೆ ನಾವೆಲ್ಲರೂ ಒತ್ತಾಯ ಮಾಡಿ ಹೇಳಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ್ದಾರೆ, ನಾನೂ ಹೇಳಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ಅವರೂ ಹೇಳಿದರು. ವೆಂಕಟಮ್ಮನಹಳ್ಳಿ ಪ್ರಕರಣಕ್ಕೆ ಪ್ರತ್ಯೇಕವಾಗಿ ಸದನ ಸಮಿತಿ ರಚನೆ ಆಗಬೇಕು. ನೀವು ನಿರ್ವೀಯರನ್ನಾಗಿ ಅಲ್ಲಿ ಪೋಲೀಸ್‌ನವರನ್ನು ಇಟ್ಟು ಅವರಿಗೆ ಏನೂ ಅಸ್ತ್ರ ಕೊಡದೇನೇ ಬೀದಿಯಲ್ಲಿ ಅವರನ್ನು ನಿಲ್ಲಿಸಿ ಬಿಟ್ಟಿರಿ. ನಿಶಸ್ತ್ರರಾಗಿ ಬೀದಿಯಲ್ಲಿದ್ದಂತಹ ಏಳು ಜನ ಅಮಾಯಕ ಪೋಲೀಸರು ಬಲಿಯಾದರು. ಅದಕ್ಕೆ ಯಾರು ಕಾರಣ? ಅದನ್ನು ತನಿಖೆ ಮಾಡಬೇಕು. ಸದನ ಸಮಿತಿ ರಚನೆ ಮಾಡಿ ಎಂದು ಹೇಳಿ ನಾವು ನಿರ್ದಿಷ್ಟವಾಗಿ ಒತ್ತಾಯ ಮಾಡಿದೆವು. ಅದರ ಬಗ್ಗೆನೂ ಏನೂ ಪ್ರಸ್ತಾಪ ಮಾಡಲಿಲ್ಲ. ಆದ್ದರಿಂದ ನಾವು ಯಾವ ವಿಚಾರವನ್ನು ನಿನ್ನೆಯಿಂದ ಚರ್ಚೆ ಮಾಡಿದ್ದೇವೆ ಆ ವಿಚಾರಕ್ಕೆ ಸಮರ್ಪಕವಾದಂತಹ, ಸರಿಯಾದಂಥ ರೀತಿಯಲ್ಲಿ ಉತ್ತರ ಬರಲಿಲ್ಲ ಎಂದು ಹೇಳತಕ್ಕಂಥದ್ದು ನಮ್ಮ ಅಭಿಪ್ರಾಯ. ಅದಕ್ಕೆ ಉತ್ತರ ಕೊಡಬೇಕೆಂದು ನಾವು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಿಮ್ಮ ಲಕ್ಷ್ಯವೇ ಬೇರೆ ಕಡೆ ಇದ್ದ ಹಾಗೆ ಕಾಣುತ್ತದೆ. ನಮಗೆ ಗೊತ್ತಿಲ್ಲ ಏಕೆ ಎಂದು? ನಾವು ಹಿಂದೆ ನಿಮ್ಮ ಅನುಭವ ಇಷ್ಟು ವರ್ಷದ ರಾಜಕೀಯ ಅನುಭವ ಆಧಾರದ ಮೇಲೆ ನಾವು ಅಂದುಕೊಂಡಿದ್ದೆವು ಈ ಚರ್ಚೆಯನ್ನು ತಾವು ಬಹಳ ಗಂಭೀರವಾಗಿ ತೆಗೆದುಕೊಳ್ಳುತ್ತೀರಿ ಎಂದು ಭಾವಿಸಿದ್ದೆ. ಕಾರಣ ಏನು ಎಂಬುದು ನನಗೆ ಗೊತ್ತಿಲ್ಲ. ಬಹುಶಃ ಈ ರಾಜ್ಯದ ಜನರನ್ನು ದೇವರೇ ಕಾಪಾಡಬೇಕು ಎಂದು ಕಾಣುತ್ತದೆ. ಬರುವ ದಿವಸಗಳು ಹೇಗೆ ಮಾಡಬೇಕು ಎಂದು ಹೇಳಿ ಅವರವರೇ ಅವರ ರಕ್ಷಣೆ ಮಾಡಿಕೊಳ್ಳುವ ಜವಾಬ್ದಾರಿ ಹೆಚ್ಚಿರುವಂತಹ ದುಸ್ಥಿತಿ ಬರಬಹುದೇನೋ ಗೊತ್ತಿಲ್ಲ. ಚಿಕ್ಕಮಗಳೂರಿನ ಡಿಸಿ, ಎಸ್‌ಪಿ ಅವರಿಗೆ ಏನಾದರೂ ಪ್ರತಿಪಕ್ಷಗಳನ್ನು ಹತ್ತಿಕ್ಕುವುದಕ್ಕೋಸ್ಕರ ಅವರಿಗೆ ಜವಾಬ್ದಾರಿ ಕೊಟ್ಟಿದ್ದೀರೇನೋ ಗೊತ್ತಿಲ್ಲ. ಅವರಿಗೆ ನೀವು ಸರ್ಟಿಫಿಕೇಟ್ ಕೊಡುವಂತಹ ಪ್ರಯತ್ನ ಮಾಡಿಬಿಟ್ಟಿರಿ. ದತ್ತ ಜಯಂತಿಗೆ ನೀವೇ ಕೆಲವರು ಹೋಗಿಕೊಂಡು, ಮಾಡಿಕೊಂಡು, ಬೇರೆ ಬಹು ಸಂಖ್ಯಾತ ಹಿಂದೂಗಳನ್ನು ಹತ್ತಿಕ್ಕಿ, ಅವರ ಭಾವನೆಗಳಿಗೆ ಧಕ್ಕೆ ತಂದು. ಈಗ ಅವರಿಗೆ ಸರ್ಟಿಫಿಕೇಟ್ ಕೊಡುವಂತಹ ಮಹತ್ಕಾರ್ಯ ಮಾಡಿದ್ದೇನೆಂದು ಹೇಳುವಂತಹ ಪ್ರಯತ್ನವನ್ನು ಮಾಡಿದಿರಿ. ಅದರಿಂದ ಈ ಕಾನೂನು ಸುವ್ಯವಸ್ಥೆ, ರಾಜ್ಯ ಸರ್ಕಾರದ ದೊಡ್ಡ ಜವಾಬ್ದಾರಿ. ಆ ಕೆಲಸ ಮಾಡಿದೇನೇ ಮಾನ್ಯ ಸಿಂಧ್ಯಾ ಅವರೇ, ನಿಮ್ಮ ಕಾಲದಲ್ಲಿ ಎಷ್ಟು ಫೈರಿಂಗ್ ಆಗಿತ್ತೋ ಗೊತ್ತಿಲ್ಲ. ನನ್ನ ಕಾಲದಲ್ಲಿ ಏನೂ ಆಗಲಿಲ್ಲ ಎಂದು ಹೇಳಿ

ಅದೇ ಸರ್ಟಿಫಿಕೇಟ್ ತೆಗೆದುಕೊಳ್ಳುವುದಾದರೆ ಬಹುಶಃ ಈ ಉತ್ತರದಿಂದ ನಮಗ್ಯಾರಿಗೂ ತೃಪ್ತಿ ಆಗಿಲ್ಲ. ಚರ್ಚೆ, ಕ್ಲಾರಿಫಿಕೇಶನ್ ಕೇಳುವುದರಿಂದ, ಅದಕ್ಕೆ ಉತ್ತರ ಕೊಡುವಂತಹ ಮನಸ್ಥಿತಿಯಲ್ಲೂ ಸಹ ನೀವು ಇಲ್ಲ. ಈ ನೀತಿ ಈ ಕಾನೂನು ಸುವ್ಯವಸ್ಥೆ ಹದಗೆಟ್ಟುತ್ತಿದ್ದರೂ ನೀವು ಕೈಕಟ್ಟಿ ಕುಳಿತಿರುವುದನ್ನು ನಾವು ಪ್ರತಿಭಟನೆ ಮಾಡು ನಾವು ವಾಕೌಟ್ ಮಾಡಿ ಹೋಗುತ್ತೇವೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ತಾವುಗಳು walkout ಮಾಡಲಿಕ್ಕೇ ಬಂದಿರುವುದು ಎಂಬುದು ನನಗೆ ಗೊತ್ತಿತ್ತು. ರಾಜ್ಯದ ನಕ್ಸಲೀಯ ಚಟುವಟಿಕೆಗಳ ಬಗ್ಗೆ, ಲಾ ಅಂಡ್ ಆರ್ಡರ್ ಬಗ್ಗೆ ಇದಕ್ಕಿಂತ ಹೆಚ್ಚು ಏನೂ ಉತ್ತರ ಬೇಕಿಲ್ಲ. ನಾನು ಏನು ನಿಮಗೆ ಹೇಳಿದೆ? ರಾಜ್ಯದಲ್ಲಿ ಸುವ್ಯವಸ್ಥೆ ಚೆನ್ನಾಗಿದೆ. ಪಂಚಾಯಿತಿ ಚುನಾವಣೆ ನಡೆದಿದೆ. ಎಲ್ಲಾ ಕಡೆಗೂ ವ್ಯವಸ್ಥೆ ಮಾಡುತ್ತಿದ್ದೇವೆ. ಡಾ. ಸುದರ್ಶನ್ ಅವರು ಬಂದಿದ್ದಾಗ ಕೂಡ ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದೇವೆ. ಡಾ. ಸುದರ್ಶನ್ ಅವರೇ ಒಳ್ಳೆಯ ಸರ್ಟಿಫಿಕೇಟ್ ಕೊಟ್ಟಿದ್ದಾರೆಂದು ನಾವು ಹೇಳಿದ್ದೇವೆ.

(ಗೊಂದಲ)

ಶ್ರೀ ಜಿ.ಶಿವಣ್ಣ : ಅಲ್ಲ ಸಾಹೇಬರೇ, ಒಂದೇ ಒಂದು ನಿಮಿಷ. ಏಳು ಜನ ಪೋಲೀಸ್ ನವರು ಸತ್ತು ಹೋದರೆ ಅದರ ಬಗ್ಗೆ ಸ್ವಲ್ಪವೂ ಕನಿಕರ ಇಲ್ಲದೆ, ನನ್ನ ಆಡಳಿತ ಚೆನ್ನಾಗಿದೆ ಎಂದು ಹೇಳಿಕೊಳ್ಳುತ್ತೀರಲ್ಲಾ, ಇದು ಯಾವ ನ್ಯಾಯ ಸ್ವಾಮಿ? ಇದು ಯಾವ ನ್ಯಾಯ ಹೇಳಿ?

ಶ್ರೀ ಧರ್ಮಸಿಂಗ್ : ಈಗ ಕೇಳಿ. ಏನಾಗಿದೆ ಎಂದರೆ . . .

ಶ್ರೀ ಜಗದೀಶ್ ಶೆಟ್ಟರ್ : ಮಂತ್ರಿಗಳೂ ಹೋಗಲಿಲ್ಲ, ಯಾರೂ ಹೋಗಲಿಲ್ಲ. ಆ ಕುಟುಂಬಕ್ಕೆ ಸಮಾಧಾನ ಮಾಡುವಂತಹ ವ್ಯವಧಾನವೂ ಇಲ್ಲ ತಮಗೆ. ಮಾನ್ಯ ಮುಖ್ಯ ಮಂತ್ರಿಗಳು ಹೋಗಬೇಕಾಗಿತ್ತು. ಏಳು ಜನ ಪೋಲೀಸರು ಸತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಬೇಕಾಗಿತ್ತು. ಆ ಕುಟುಂಬದವರನ್ನು ಭೇಟಿ ಆಗಿ ಬರಬಹುದಾಗಿತ್ತು. ಅಲ್ಲಿಗೆ ಒಬ್ಬ ಮಂತ್ರಿ ಸಹಿತ ಹೋಗಿಲ್ಲ.

ಶ್ರೀ ಜಿ.ಶಿವಣ್ಣ : ಪಾವಗಡಕ್ಕೆ ಹೋದರೆ ಗೊತ್ತಾಗುತ್ತದೆ. ಏಕೆಂದರೆ ......

(ಗೊಂದಲ)

ಶ್ರೀ ಧರ್ಮಸಿಂಗ್ : ಜಿಲ್ಲಾ ಉಸ್ತುವಾರಿ ಸಚಿವರು ಹೋಗಿ ಬಂದಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ : ತಾವು ಮೂರು ಉದಾಹರಣೆ ಕೊಟ್ಟಿರಿ. ಮಾನ್ಯ ಲಾಲ್‌ಕೃಷ್ಣ ಅಡ್ವಾನಿಯವರ ಬಗ್ಗೆ ಹೇಳಿದಿರಿ. ಇಂದಿರಾ ಗಾಂಧಿ ಹತ್ಯೆ ಸಂದರ್ಭ ಹೇಳಿದಿರಿ. ರಾಜೀವ್ ಗಾಂಧಿ ಹತ್ಯೆ ಸಂದರ್ಭ ಹೇಳಿದಿರಿ.

ಶ್ರೀ ಧರ್ಮಸಿಂಗ್ : ಅದಾದ ಮೇಲೆ ಹೇಳುತ್ತೇನೆ. ಹೇಳಿ. ನಿಮಗೆ ಬೇರೆ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ : ಅವರೆಲ್ಲರದ್ದೂ ಕೂಡ ನಿರ್ನಾಮ ಆಗಿ ಹೋಯಿತು. ಯಾರ್‍ಯಾರು ಅನ್ಯಾಯ ಮಾಡಿದರೋ ಅವರೆಲ್ಲಾ ನಿರ್ನಾಮ ಆಗಿ ಹೋದರು. ನಾನು ಅವರನ್ನು ನಿರ್ನಾಮ ಮಾಡುತ್ತೇನೆಂದು ಒಂದು ಮಾತು ನಿಮ್ಮ ಬಾಯಿಂದ ಬರಲಿಲ್ಲ. ತಾವು ದಯವಿಟ್ಟು ಕೇಳಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಈಶ್ವರಪ್ಪನವರೆ ಕೇಳಿ . .

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಸಾರ್, ದಯವಿಟ್ಟು ಕೇಳಿ.

ಶ್ರೀ ಧರ್ಮಸಿಂಗ್ : ನಾನು ಈ ರಾಜ್ಯದ ಮುಖ್ಯಮಂತ್ರಿ. ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ನಾವು ನಿಯಂತ್ರಣ ಮಾಡಿದ್ದೇವೆ. ಸಾಕೇತ್ ರಾಜ್‌ರವರನ್ನು ನೀವು ಮಾಡಿದಿರಾ? ಯಾವ ನಿಮ್ಮ ರಾಜ್ಯದಲ್ಲಿ ಮಾಡಿದ್ದೀರಿ? ಈಗ ನವೀನ್ ಪಾಟ್ನಾಯಕ್‌ಗೆ ಬೆಂಬಲ ಕೊಡುತ್ತಿದ್ದೀರಿ. ಶ್ರೀ ವೆಂಕಯ್ಯ ನಾಯ್ಡು ಅವರು ಅಲ್ಲಿ ಬಿದ್ದು ಬಿಟ್ಟರು. ಎಲ್ಲಿ ಸಂರಕ್ಷಣೆ ಇದೆ?

ಶ್ರೀ ಕೆ.ಎಸ್.ಈಶ್ವರಪ್ಪ : ಹದ್ದು ಮೀರಿ ಮಾತನಾಡಬಾರದು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ದತ್ತ ಪೀಠದ ಬಗ್ಗೆ ಹೇಳಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ಹಿಂದೂಗಳ ಮೆರವಣಿಗೆಯನ್ನು ತಾವು ನಿಲ್ಲಿಸಿ ದೊಡ್ಡ ಕೆಲಸ ಮಾಡಿದ್ದೀರಿ. ನೀವು ಮುಸಲ್ಮಾನರ ಮೆರವಣಿಗೆ ನಿಲ್ಲಿಸುವ ಕೆಲಸ ಮಾಡಿ.

ಶ್ರೀ ಧರ್ಮಸಿಂಗ್ : ನೀವು ಆರ್‌ಎಸ್‌ಎಸ್ ಕ್ಯಾಂಪ್ ಮಾಡಿದ್ದೇ ಬೇರೆ ಉದ್ದೇಶಕ್ಕೋಸ್ಕರ. ನೀವು ಆರ್‌ಎಸ್‌ಎಸ್ ಕ್ಯಾಂಪ್ ಮಾಡಿದ್ದೇ ಬೇರೆ ಉದ್ದೇಶಕ್ಕೋಸ್ಕರ ಮಾಡಿದ್ದು.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಕ್ಸಲೀಯರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಒಂದು ಮಾತನ್ನು ಹೇಳಲಿಲ್ಲ. ಇದೊಂದು ಸರ್ಕಾರವೇ? ನಿಮ್ಮನ್ನು ಮುಖ್ಯ ಮಂತ್ರಿ ಎಂದು ಹೇಳಬೇಕೇ?

(ಗೊಂದಲ)

ಶ್ರೀ ಪಿ.ಟಿ.ಪರಮೇಶ್ವರ ನಾಯಕ್ : ಅವರಿಗೆ ಬೇಕೆ ಕೆಲಸ ಇಲ್ಲ. ವಾಕ್‌ಔಟ್ ಮಾಡುವುದೇ ಅವರ ಕೆಲಸ. ವಾಕ್‌ಔಟ್ ಮಾಡಲಿ ಬಿಡಿ

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ...ಕಳಕಳಿ ಇಲ್ಲ. ಈ ವಿಷಯವನ್ನು ರಾಜಕೀಯ ಗೊಳಿಸಲು ನಾನು ಸಿದ್ಧನಿಲ್ಲ. ನಿಮ್ಮ ಒಂಭತ್ತು ತಿಂಗಳ ಅಧಿಕಾರಾವಧಿಯಲ್ಲಿ ನಾಡಿನ ಜನರು ಧೈರ್ಯ ಮತ್ತು ಗೌರವದಿಂದ ರಸ್ತೆಗಳಲ್ಲಿ ಓಡಾಡಲು ಸಾಧ್ಯವಾಗದಂಥ ವಿಚಿತ್ರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಿಮ್ಮ ಪೊಲೀಸ್ ಇಲಾಖೆಯ ಬಹಳ ಪ್ರಮುಖರು ಈ ಚಟುವಟಿಕೆಯಲ್ಲಿ ಕೈ ಜೋಡಿಸಿದ್ದಾರೆ. ಸರ್ಕಾರದ ಇಂತಹ ನೀತಿಯನ್ನು ಖಂಡಿಸಿ ... ತಾವು ಇವೊತ್ತು ಅಂತಹ ಜಿಲ್ಲಾಧಿಕಾರಿಗಳಿಗೆ ಸರ್ಟಿಫಿಕೇಟ್ ಕೊಡುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ : ನಕ್ಸಲೀಯರಿಗೆ, ಕೊಲೆಗಾರರಿಗೆ ಆಶ್ರಯ ನೀಡುತ್ತಿರುವ ಸರ್ಕಾರ ಇದಾಗಿದೆ.

ಶ್ರೀ ಧರ್ಮಸಿಂಗ್ : ಚುನಾವಣೆಯಲ್ಲಿ ತೋರಿಸಿ. ಇಲ್ಲಿ ಬೇಡ ಚಿಕ್ಕಮಗಳೂರಿನಲ್ಲಿ ಹೋಗಿ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ವಿರೋಧ ಪಕ್ಷದ ನಾಯಕರಾದ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ನಡೆಸಿದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಮಗೆ ಉತ್ತರ ಹೇಳಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಛೇರ್ಮನ್‌ರವರೆ, ...

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಸ್ಪಷ್ಟೀಕರಣ ಕೇಳಿದ್ದೇವೆ. ಮುಖ್ಯಮಂತ್ರಿಗಳು ಭಾಷಣ ಮಾಡಿದ ನಂತರವೂ ಮತ್ತೆ ಭಾಷಣ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಭಾಷಣವನ್ನು ಮತ್ತೆ ಕೇಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರಾದ ಸಿ.ಟಿ.ರವಿಯವರು placard ಹಿಡಿದುಕೊಂಡು ಸದನದ ಬಾವಿಯೊಳಗೆ ಬಂದರು. ಕಾನೂನು ಮತ್ತು ನಿಯಮಾವಳಿಯ ಚೌಕಟ್ಟಿನಲ್ಲಿ ಸಂವಿಧಾನಬದ್ಧವಾಗಿ ವಿಷಯಗಳನ್ನು ಪ್ರಸ್ತಾಪಿಸಲು ಕರೆದಿರುವ ಈ ಸಭೆಯಲ್ಲಿ placards ಹಿಡಿದುಕೊಂಡು ಬಂದು ಪ್ರತಿಭಟಿಸುವುದು, that is below the dignity of this House. ಅವರು ಹೊಸ ಸದಸ್ಯರಾಗಿದ್ದು, ಬಹುಶಃ ಅವರಿಗೆ ಇಲ್ಲಿನ ಕಾನೂನು ಸಂಪ್ರದಾಯದ ಪರಿಚಯವಿಲ್ಲ. ಛೇರ್ಮನ್ ಆಗಿರುವ ತಾವು ಇದನ್ನು ತೀವ್ರವಾಗಿ ಗಣನೆಗೆ ತೆಗೆದುಕೊಳ್ಳುವ ಮೂಲಕ ಅವರನ್ನು ಕರೆದು ಅವರಿಗೆ ಮತ್ತು ಇತರರಿಗೆ ಅಧ್ಯಕ್ಷ ಪೀಠದಿಂದ warning ಕೊಡಬೇಕಾಗುತ್ತದೆ. ಈ ರೀತಿಯಲ್ಲಿ ಇದೆಲ್ಲವನ್ನೂ ಮಾಡುತ್ತಾ ಹೋದರೆ ಇದು ವಿಧಾನಸಭೆಯಾಗುವುದಿಲ್ಲ, ಬಹಿರಂಗ ಸಭೆಯಾದಂತಾಗುತ್ತದೆ. ಆದುದರಿಂದ, ತಾವು ದಯಮಾಡಿ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ನಮ್ರತೆಯಿಂದ ಬೇಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಮಾತನಾಡುತ್ತಾ ಸದನ ಸಮಿತಿ ರಚಿಸಬೇಕೆಂದರು. ಈ ಸಂಬಂಧ ನಾನು ಆ ಸ್ಥಳಕ್ಕೆ ಭೇಟಿ ನೀಡುತ್ತೇನೆ. ತಮ್ಮನ್ನೂ ಒಳಗೊಂಡಂತೆ ಅಲ್ಲಿನ ಶಾಸಕರುಗಳೆಲ್ಲರನ್ನೂ ಕರೆದುಕೊಂಡು ಅತಿ ಶೀಘ್ರದಲ್ಲೇ ಪಾವಗಡದಲ್ಲಿರುವ ವೆಂಕಟಮ್ಮನಹಳ್ಳಿಗೆ ಭೇಟಿ ಕೊಡುವ ಕಾರ್ಯಕ್ರಮ ಹಮ್ಮಿಕೊಳ್ಳೋಣ. ಪೊಲೀಸ್ ಇಲಾಖೆ ಸುಧಾರಣೆ ಕುರಿತಂತೆ ಧರ್ಮವೀರ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತಂದಿದ್ದೇವೆ. ಪೊಲೀಸ್ ಇಲಾಖೆಯನ್ನು ಆಧುನೀಕರಣಗೊಳಿಸುವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಇವೊತ್ತು ಬೆಂಗಳೂರಿನ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಅಪರಾಧ ಪ್ರಕರಣಗಳೂ ಸಹ ಹೆಚ್ಚಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ನಮ್ಮ ಇಂಟೆಲಿಜೆನ್ಸ್ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇಂಟೆಲಿಜೆನ್ಸ್ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವುದಕ್ಕೆ ಸಮರ್ಥನೆ ಏನೆಂದರೆ, ಮಧ್ಯರಾತ್ರಿ 1 ಗಂಟೆ 45 ನಿಮಿಷದಲ್ಲಿ ಕಂಟೋನ್ಮೆಂಟ್ ರೈಲ್ವೆ ಪೊಲೀಸರು ಅಪರಾಧಿಗಳನ್ನು ಹಿಂಬಾಲಿಸಿ ಹಿಡಿದು ಅವರಿಂದ ಸೂಟ್‌ಕೇಸ್ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಅದೇ ರೀತಿ ಬೆಳಗಾಂನಲ್ಲೂ ಕೂಡ ಅಪರಾಧಿಗಳನ್ನು ಹಿಡಿದರು. ಅದಕ್ಕೋಸ್ಕರ, ನಾನು ಹೇಳುವುದೇನೆಂದರೆ, our intelligence is very good. With all that, ಸಾಲದು, ಬೆಂಗಳೂರಿನ ಜನಸಂಖ್ಯೆಗನುಗುಣವಾಗಿ ಪೊಲೀಸ್ ಬಲವನ್ನು ಇನ್ನೂ ಹೆಚ್ಚಿಸುವುದಕ್ಕೆ ಗಮನಹರಿಸುತ್ತೇವೆ.

ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಒಂದು ವಿಚಾರ ಪ್ರಸ್ತಾಪಿಸಿದರು. ನೀವು ಗಮನಿಸಿದ್ದೀರೋ? ಇಲ್ಲವೋ? ಈಗ ನಮ್ಮ ಅಭಿವೃದ್ಧಿ ಆಯುಕ್ತರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಹಾಗೂ ಇನ್ನಿತರ ಅಧಿಕಾರಿಗಳು ಮೇಣಸಿನ

ಹಾಡ್ಯಕ್ಕೆ ಭೇಟಿ ಕೊಟ್ಟಿದ್ದು, ನಾಳೆ ವಾಪಸ್ಸು ಬರುತ್ತಿದ್ದಾರೆ. ಅಲ್ಲದೆ, ಈ ಕುರಿತಂತೆ ಈಗಾಗಲೇ ಕ್ಯಾಬಿನೆಟ್ ಸಹ we have taken a decision, ಒಂದು ತೀರ್ಮಾನ ಕೈಗೊಂಡು, ಅಲ್ಲಿನ ಬುಡಕಟ್ಟು ಜನಾಂಗದವರಿಗೆ ಜಮೀನು ಮಂಜೂರು ಮಾಡುವ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲು 25 ಕೋಟಿ ರೂಪಾಯಿಗಳ ಯೋಜನೆ ಹಮ್ಮಿಕೊಂಡಿದ್ದೇವೆ. ಅಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಯಿಂದುಂಟಾಗುವ ಸನ್ನಿವೇಶಗಳು, ಮತ್ತು ದಲಿತರ ಸಮಸ್ಯೆಯೂ ಇದೆ. ಇನ್ನೂ ಪಾವಗಾಡದ ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸರು ತಂಗಿದ್ದಾಗ ಅವರ ಮೇಲೆ ನಕ್ಸಲೀಯರು ಫೈರ್ ಮಾಡುವ ಕಾಲದಲ್ಲಿ ಅಲ್ಲಿರುವ ಬಡವರೆಲ್ಲರೂ ಏನು ಹೀಗಾಗುತ್ತಿದೆಯೆಂದು ಮೂಕಪ್ರೇಕ್ಷಕರಾಗಿ ನೋಡುತ್ತಿದ್ದರು. ಅವರಿಗೆ ಆ ಭಾವನೆಗಳು ಏಕೆ ಬರುತ್ತದೆಂದರೆ, 'ಸರ್ಕಾರ ನಮ್ಮ ಬಗ್ಗೆ ಏನಾದರೂ ಮಾಡುತ್ತದೆಯೇ? ಇಲ್ಲವೇ?' ಎಂಬ ಬಗ್ಗೆ ಅವರಿಗೆ ನಿರಾಶೆಯುಂಟಾಗಿರಬೇಕು. ಅದರ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ. ಈ ಸಂಬಂಧ ಸುಮಾರು ಅರವತ್ತು ಕೋಟಿ ರೂಪಾಯಿಗಳ ಪ್ಯಾಕೇಜ್ ಏನಿದೆ, ಹಿಂದಿನ ಮುಖ್ಯಮಂತ್ರಿಗಳು ಈ ಕುರಿತಾದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರು. ಸದರಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಇನ್ನೂ ಮಂಜೂರಾತಿ ಸಿಕ್ಕಿಲ್ಲ. ಇದರ ಬಗ್ಗೆ ಮೊನ್ನೆ ದೆಹಲಿಗೆ ಹೋಗಿದ್ದಾಗಲೂ ಮಂಜೂರು ಮಾಡಿಕೊಡಬೇಕೆಂದು ಕೇಳಿದ್ದೇವೆ. ಪ್ರಸ್ತಾವನೆಗೆ forest and environment clearance ಸಿಗದೇ ಹಾಗೆಯೇ ಉಳಿದುಕೊಂಡಿರುವುದರಿಂದ ಅದರ ಬಗ್ಗೆ ಗಮನಹರಿಸುತ್ತೇವೆ. ಇನ್ನು ವಿಶ್ವವಿದ್ಯಾಲಯಗಳಲ್ಲಿರುವ ಪ್ರೊಫೆಸರುಗಳ ಕುರಿತು ಹೇಳುವುದಾದರೆ, ಇವೊತ್ತು ಜವಹರಲಾಲ್ ನೆಹರೂ ಯೂನಿವರ್ಸಿಟಿ, that is one of the prestigious Universities in the country. ಇದರ ಬಗ್ಗೆ ಅವರು 'ಇಸಂ' ಮೇಲೆ ಮಾತನಾಡುತ್ತಾರೆ, ರಾಜಕೀಯ ಉದ್ದೇಶಗಳ ಬಗ್ಗೆ ಮಾತನಾಡುತ್ತಾರೆ. ಪೊಲಿಟಿಕಲ್ ಪಾರ್ಟೀಸ್ ಯಾವ ರೀತಿಯಾಗಿ ಅವರ ಪ್ರೋಗ್ರಾಮ್ ಇವೆ ಎಂಬ ಬಗ್ಗೆ ಮಾತನಾಡುತ್ತಾರೆ. ಆದರೆ, ಇವರಿಗೆ ಇದೆಲ್ಲಾ ಅರ್ಥವಾಗುವುದಿಲ್ಲ. ಇವರಿಗೆ ಬಾಬಾಬುಡನ್‌ಗಿರಿ ಒಂದೇ ಅರ್ಥವಾಗುವುದು, ಬೇರೆ ವಿಚಾರ ಅರ್ಥವಾಗುವುದಿಲ್ಲ ! ಅಂತಹವರಿಗೆ ನಾನೇನು ಹೇಳಬೇಕು? That is also one of the problems. ಅದಕ್ಕೋಸ್ಕರ, ಯಾವ್ಯಾವ ವಿಶ್ವವಿದ್ಯಾಲಯಗಳಲ್ಲಿ ಯಾವ್ಯಾವ ಪ್ರೊಫೆಸರುಗಳು ಮಾಡುತ್ತಾ ಇದ್ದಾರೆ, ಅದು ನಮ್ಮ ಗಮನದಲ್ಲಿರುತ್ತದೆ. ಅದು ಬಹಿರಂಗವಾಗಿ ಹೇಳತಕ್ಕಂಥದ್ದಲ್ಲ. ಅವರ ಮೇಲೆ ಹೆದರಿಕೆ ಮಾಡತಕ್ಕಂಥದ್ದಲ್ಲ. ಅವರೆಲ್ಲರಿಗೂ ಕೂಡ ಫಂಡಮೆಂಟಲ್ ರೈಟ್ಸ್ ಇವೆ. ಅದನ್ನು ಹೇಗೆ ಹತ್ತಿಕ್ಕಲು ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರ ನಕ್ಸಲೈಟ್ಸ್‌ರನ್ನು ಬಗ್ಗು ಬಡಿಯತಕ್ಕ ರೀತಿಯಲ್ಲಿ ಕ್ರಮ ಕೈಗೊಂಡಿದೆ. ಈವತ್ತು ನಾವು ಹಿಡಿದು ಹಾಕಿದ ಆ ಇಬ್ಬರೂ They are the Capains. At the same time, ಇದಕ್ಕಿಂತಲೂ ಇನ್ನೇನು ಬೇಕು? ಅವರು ಇದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಚಿಕ್ಕಮಗಳೂರಿನಲ್ಲಿ ನಡೆಯುತ್ತಿರುವ ಆಕ್ಟಿವಿಟೀಸ್‌ಗೆ ಮುಂಜಾನೆ ನಾಲ್ಕು ಗಂಟೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಶ್ರೀನಿಧಿಯವರಿಗೆ 32 ಗುಂಡೇಟುಗಳು ತಗುಲಿವೆ. ಅವರ ತಲೆ ಸಂಪೂರ್ಣ ನಾಶವಾಗಿದೆ. ಈ ತರಹ ಪೊಲೀಸರ ಮೇಲೆ ಧಾಳಿ ನಡೆಸಲಾಗಿದೆ. ಒಂದೆಡೆ ರಾಜ್ಯದ ಜನರನ್ನು ಸಂರಕ್ಷಿಸುವ ರೀತಿಯಲ್ಲಿ ಪೊಲೀಸರಾದವರು ಆ ಭಾಗದಲ್ಲಿ ವಿಶೇಷ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು. ಜೊತೆಗೆ, ಕಾನೂನು ಮತ್ತು ಸುವ್ಯವಸ್ಥೆಯನ್ನೂ ಕಾಪಾಡಬೇಕು. ಇದೆಲ್ಲವನ್ನೂ ನಾವು ಮಾಡುತ್ತಿದ್ದೇವೆಂಬ ಮಾತನ್ನು ಹೇಳಿದ್ದೇವೆ. ರಾಷ್ಟ್ರೀಯ

ಸ್ವಯಂ ಸೇವಕ ಸಂಘದ ಅಧ್ಯಕ್ಷರಾದ ಡಾ. ಸುದರ್ಶನ್‌ರವರು ಮಂಗಳೂರಿಗೆ ಬಂದು ಎರಡು ಗಂಟೆಗಳ ಕಾಲ ಭಾಷಣ ಮಾಡಿದರು. ಅಲ್ಲಿ ಸುಮಾರು ಮೂರು ಸಾವಿರದಷ್ಟು ಸಂಖ್ಯೆಯಲ್ಲಿ ಸ್ವಯಂ ಸೇವಕರಿದ್ದರು. ಲಾಲ್‌ಕೃಷ್ಣ ಅಡ್ವಾಣಿಯವರೂ ಇದ್ದರು. ಇವರೆಲ್ಲರೂ (ಭಾರತೀಯ ಜನತಾ ಪಕ್ಷದ ಸದಸ್ಯರು) ಹೋಗಿದ್ದರು. ಅಲ್ಲಿ ಏನಾದರೂ ಅಹಿತಕರ ಘಟನೆ ಜರುಗಿತೇ? ಏನೂ ಆಗಿಲ್ಲ. ಅವರು ಸಮಾವೇಶವನ್ನು ಎಲ್ಲಿ ನಡೆಸಿದ್ದಾರೆಂದರೆ, ನಕ್ಸಲೀಯ ಚಟುವಟಿಕೆ ಜರಗುವ ಪ್ರದೇಶದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಮಾವೇಶ ಜರುಗಿಸಿದ್ದಾರೆ. ಇದರ ಬಗ್ಗೆ ಡಾ. ಸುದರ್ಶನ್‌ರವರೇ ``A good arrangement you have made'' ಎಂದು ಸರ್ಟಿಫಿಕೇಟ್ ಕೊಟ್ಟು, ಸರ್ಕಾರಕ್ಕೂ ಮತ್ತು ಪೊಲೀಸರಿಗೂ ಶಹಭಾಷ್‌ಗಿರಿ ನೀಡಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಛೇರ್ಮನ್‌ರವರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಇದೊಂದು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆ ಎಂಬುದಾಗಿ ಒಪ್ಪಿಕೊಂಡಿದ್ದಾರೆ. ಮತ್ತು ಅಲ್ಲಿನ ಸ್ಥಳೀಯರ ಅಭಿವೃದ್ಧಿಗಾಗಿ ಪ್ಯಾಕೇಜ್ ಒದಗಿಸಿಕೊಡುವುದಾಗಿ ತಿಳಿಸಿದ್ದಾರೆ. ಪ್ಯಾಕೇಜ್ ಅನ್ನು ಕೆಲವೇ ಭಾಗಗಳಿಗೆ ಒದಗಿಸಿದರೆ ಸಾಕಾಗುವುದಿಲ್ಲ. ಅಲ್ಲಿರುವ ಇಡೀ ಭಾಗಕ್ಕೆ ಪ್ಯಾಕೇಜಿನ ವ್ಯವಸ್ಥೆಯಾಗಬೇಕು. ಕಂದಾಯ ಸಚಿವರಾದ ಮಾನ್ಯ ಎಂ.ಪಿ.ಪ್ರಕಾಶ್‌ರವರು ನಿನ್ನೆ ಪ್ರಶ್ನೆಯೊಂದಕ್ಕೆ ಉತ್ತರಿಸುವಾಗ ಅಲ್ಲಿರುವವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು ತಿಳಿಸಿರುವ ವಿಚಾರವನ್ನು ನಾನು ಸ್ವಾಗತಿಸುತ್ತೇನೆ. ಈಗ ಸದನದಲ್ಲಿ ಅರಣ್ಯ ಸಚಿವರು ಇಲ್ಲ. ಆದರೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿದ್ದಾರೆ. ಅವರ ಮೂಲಕ ಅಲ್ಲಿನ ಸ್ಥಳೀಯ ಅಧಿಕಾರಿಗಳಿಗೆ ಮಾಹಿತಿ ನೀಡಿ. ಇಲ್ಲಿ ತಾವು ಹೇಳಿಕೆ ನೀಡುತ್ತೀರಿ. ಆದರೆ, ಅಲ್ಲಿ 'ನಮಗೆ ಸರ್ಕಾರದಿಂದ ಆದೇಶ ಬಂದಿಲ್ಲ' ಎನ್ನುತ್ತಾರೆ. ಅವರುಗಳನ್ನು ಅಲ್ಲಿಂದ ಒಕ್ಕಲೆಬ್ಬಿಸುವ ಕೆಲಸವನ್ನು ನಿಲ್ಲಿಸಿದರೆ ಸಮಸ್ಯೆಗೆ ಅರ್ಧ ಪರಿಹಾರ ಕಂಡುಕೊಂಡಂತಾಗುತ್ತದೆ. ದಯವಿಟ್ಟು ಅವರುಗಳನ್ನು ಆ ಸ್ಥಳದಿಂದ ಒಕ್ಕಲೆಬ್ಬಿಸುವ ಪ್ರಯತ್ನ ಮಾಡಬಾರದು. ಒಕ್ಕಲೆಬ್ಬಿಸಿದರೆ ಉಳಿದ ಭಾಗಗಳಲ್ಲೂ ಈ ಸಮಸ್ಯೆ ಹಬ್ಬುತ್ತದೆ.

ನಿನ್ನೆ ರಾತ್ರಿ ನಡೆದ ಘಟನೆ ಇಂದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಪ್ರಸ್ತಾಪಿಸಿರುವುದರ ಬಗ್ಗೆ ತಿಳಿಸಿದ್ದೀರಿ. ತಾವು ಎಸ್.ಪಿ.ಯವರಿಗೆ ಫೋನ್ ಮಾಡಿದಾಗಲೂ ಏನು ಘಟನೆ ನಡೆಯಿತೆಂಬ ಬಗ್ಗೆ ಅವರಿಗೆ ಗೊತ್ತಿಲ್ಲವೆಂದರೆ, Dose he deserve to continue as head of the police wing in the district?. ಸೂಪರಿಂಟೆಂಡೆಂಟ್ ಆಫ್ ಪೋಲೀಸಿಗೆ ತಮ್ಮ ಜಿಲ್ಲೆಯಲ್ಲಿ ಏನು ಘಟನೆ ಜರುಗಿದೆ ಎಂಬ ಬಗ್ಗೆ ತಾವು ಅವರಿಗೆ ಫೋನ್ ಮಾಡುವವರೆಗೂ ಗೊತ್ತಿರಲಿಲ್ಲವೆಂದರೆ, ಅದು ದುರಂತವೇ ಸರಿ. ಮಾನ್ಯ ಮುಖ್ಯಮಂತ್ರಿಗಳು, You must take it very seriously. ಮೇಲಿನ ಒಬ್ಬ ಅಧಿಕಾರಿ ಸರಿ ಇಲ್ಲದಿದ್ದರೆ ಅವರ ಅಧೀನದಲ್ಲಿ ಕಾರ್ಯ ನಿರ್ವಹಿಸುವವರೂ ಕೂಡ ಸರಿಯಿರುವುದಿಲ್ಲವೆಂದು ಅದಕ್ಕೋಸ್ಕರವೇ ನಾನು ನಿನ್ನೆ ಹೇಳಿದ್ದು. ಮುಖ್ಯಸ್ಥರು ಸರಿ ಇಲ್ಲದಿದ್ದರೆ ಅವರ ಅಧೀನದಲ್ಲಿ ಕೆಲಸ ಮಾಡುವವರ್‍ಯಾರೂ ಸರಿಯಾಗಿರುವುದಿಲ್ಲ. ಅದರಿಂದಾಗಿಯೇ ಎಲ್ಲಾ ರೀತಿಯ ಅನರ್ಥಗಳು, ಲೈವ್‌ಬ್ಯಾಂಡ್, ಮಟಕಾ, ಪ್ರೈವೇಟ್ ಚಿಟ್ ಫಂಡ್ಸ್, ಮುಂತಾದವೆಲ್ಲವೂ ಹುಟ್ಟಿಕೊಂಡು ಸಮಸ್ಯೆಗಳುಂಟಾಗುತ್ತದೆ. ಆದುದರಿಂದ, ಇದರ ಬಗ್ಗೆ ತಾವು ಕಠಿಣ ಕ್ರಮ ಕೈಗೊಳ್ಳಬೇಕು. ವೆಂಕಟಮ್ಮನಹಳ್ಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಸಭಾತ್ಯಾಗ ನಡೆಸುವುದಿಲ್ಲ. ಈ ಕುರಿತು

ಸದನ ಸಮಿತಿ ರಚನೆಯಾಗಿ ತನಿಖೆಯಾಗಬೇಕು. ಈ ಘಟನೆ ಹೇಗೆ ಜರುಗಿತು? ನಿಶಸ್ತ್ರರಾಗಿದ್ದ ಪೊಲೀಸ್ ಅಧಿಕಾರಿಗಳ ಮೇಲೆ ನಕ್ಸಲೀಯರು ಧಾಳಿ ನಡೆಸಿರುವುದು ಮತ್ತು ಮೆಣಸಿನ ಹಾಡ್ಯದಲ್ಲಿ ಸಾಕೇತ್ ರಾಜನ್ ಅವರನ್ನು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿರುವುದು. ಈ ಎರಡೂ ಪ್ರಕರಣ ಬಗ್ಗೆ ತನಿಖೆಯಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳೆ, ಈ ಸದನವನ್ನು ತಾವು ಗೌರವಿಸುವುದಾದರೆ, ಚಿಕ್ಕಮಗಳೂರಿನ ಮೆಣಸಿನ ಹಾಡ್ಯ ಮತ್ತು ಪಾವಗಡ ತಾಲ್ಲೂಕಿನ ವೆಂಕಟಮ್ಮನಹಳ್ಳಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಎರಡೂ ಸದನಗಳ ಸದಸ್ಯರುಗಳನ್ನೊಳಗೊಂಡ ಒಂದು ಸದನ ಸಮಿತಿ ರಚಿಸುವುದಕ್ಕೆ ತಾವು ಒಪ್ಪಿಗೆ ನೀಡಬೇಕು. ನಿಮಗೆ 15 ದಿವಸಗಳಲ್ಲಿ ಆ ಕುರಿತಾದ ವರದಿ ಸಲ್ಲಿಸುತ್ತೇವೆ. ದಯಮಾಡಿ ಸದನ ಸಮಿತಿ ರಚಿಸುವುದಕ್ಕೆ ಒಪ್ಪಬೇಕು. ಈ ಹಿಂದೆ ಅನೇಕ ಸಂದರ್ಭಗಳಲ್ಲಿ ಸದನ ಸಮಿತಿ ರಚಿಸಿರುವ ನಿದರ್ಶನಗಳಿವೆ. ತಾವು ದಯಮಾಡಿ ಉತ್ತರಿಸಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ನಮ್ಮನ್ನೆಲ್ಲ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿದರು. ಆದರೆ ನಾವುಗಳೆಲ್ಲಾ ಅಲ್ಲಿಗೆ ಈಗಾಗಲೇ ಹೋಗಿ ಬಂದುಬಿಟ್ಟಿದ್ದೇವೆ. ಆದರೆ ವಾಸ್ತವವಾಗಿ ಅಲ್ಲಿ ಏನು ನಡೆಯಿತು ಎಂಬುದು ಮಾನ್ಯ ಮುಖ್ಯಮಂತ್ರಿಯವರ ಜೊತೆ ಹೋದ ತಕ್ಷಣ ಮಾಹಿತಿ ಲಭ್ಯವಾಗುವುದಿಲ್ಲ. ಅವರಿಗೆ ಗೊತ್ತಿತ್ತಾ, ಗೊತ್ತಿರಲಿಲ್ಲವೇ, ಸ್ಥಳೀಯರು ಏಕೆ ಸಹಕರಿಸಲಿಲ್ಲ, ಇಷ್ಟೊಂದು ಜನರೆಲ್ಲಾ ಹೊಡೆದು ದೀಪಾವಳಿಯಲ್ಲಿ ಪಟಾಕಿ, ಮದ್ದುಗುಂಡು ಸುಟ್ಟಂತೆ ಹೊಡೆದಾಗ ಅವರು ಏಕೆ ಪ್ರತಿಕ್ರಿಯಿಸಲಿಲ್ಲ? ಮೂಲಭೂತವಾದ ಸಮಸ್ಯೆ ಏನು ಎಂದು ಜಗತ್ತಿಗೇ ಗೊತ್ತಾಗಬೇಕಾದದ್ದು ಗೌರವವೆಂದು ಭಾವಿಸಿದ್ದೇವೆ, ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಒಂದು ಸದನದ ಸಮಿತಿಯನ್ನು ಮಾಡಲು ಒಪ್ಪಿಕೊಳ್ಳಬೇಕು. ಅಲ್ಲಿ ಬೇಕಾದಷ್ಟು ಸಾಮಾಜಿಕ ಸಮಸ್ಯೆಗಳು ಇದ್ದಾವೆ, ಅದನ್ನೆಲ್ಲಾ ಆಚೆಗೆ ತರಲು ತಾವು ಒಂದು ಅವಕಾಶವನ್ನು ನಮಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ತಾವು ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ನಾವುಗಳು ನಿಮ್ಮ ಜೊತೆ ಬರಲು ಆಗುತ್ತದೆಯೆ? ತಾವು ಬರುತ್ತಿದ್ದಂತೆ ಅಲ್ಲೆಲ್ಲಾ ದೊಡ್ಡ ಸಂತೆಯಾಗಿಬಿಡುತ್ತದೆ, ಅಲ್ಲಿ ಯಾವ ಫ್ಯಾಕ್ಟ್‌ನ್ನು ಕಂಡುಹಿಡಿಯುತ್ತೀರಿ? ಮುಖ್ಯಮಂತ್ರಿಗಳು ಬಂದರೆ ಯಾವುದಾದರೂ ವಿಷಯ ಆಚೆಗೆ ಬರುತ್ತದೆಯೆ? ನೀವು ಬರುತ್ತೀರಿ ಎಂದರೆ ಅಲ್ಲಿ ದೊಡ್ಡ ಜಾತ್ರೆಯಾಗಿಬಿಡುತ್ತದೆ. ಆದ್ದರಿಂದ ಯಾವ ವಿಷಯವೂ ಆಚೆಗೆ ಬರುವುದಿಲ್ಲ. ಆದ್ದರಿಂದ ತಾವು ದಯಮಾಡಿ ಈ ವಿಷಯದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿ, ಈ ಸಭೆಯವರನ್ನಾದರೂ ಹಾಕಿ ಅಥವಾ ಆ ಸಭೆಯವರನ್ನಾದರೂ ಹಾಕಿ, ಒಂದು ಸದನದ ಸಮಿತಿಯನ್ನು ಮಾಡಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇವೆ. ಅದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, I just bring to the Chief Minister's notice ತಮ್ಮ ಕಛೇರಿಯಿಂದ, ತಮ್ಮ office ನಿಂದ, ತಮ್ಮ ಮುಖಾಂತರ ಏನಾದರೂ order ಹೋದರೆ whether he is IPS or IAS officer, they must obey the order. If they reject the order, if they are not obeying your

instructions, you must take serious action. When the Cheif Minister is the first man, he is having the elected power ನಾವೇ ಆರ್ಡರ್ ತೆಗೆದುಕೊಂಡು ಹೋಗಿ ಮುಖ್ಯಮಂತ್ರಿಗಳ ಆರ್ಡರ್ ಎಂದು ಹೇಳಿದರೂ ಕೂಡ ಅದನ್ನು ignore ಮಾಡಿದರೆ whoever he is, you must take serious action on him ತಾವು ಇದಕ್ಕೆ ಉತ್ತರ ಕೊಡಲೇಬೇಕು It becuase hurt us. ಅದು ನಮಗೆ ನೋವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸದನದ ಸಮಿತಿಯನ್ನು ಒಪ್ಪಿಕೊಳ್ಳಬೇಕು. ಇದರಲ್ಲಿ ರಾಜಕೀಯವೇನಿಲ್ಲ, ಆದ್ದರಿಂದ ದಯವಿಟ್ಟು ಸದನದ ಸಮಿತಿಯನ್ನು ಒಪ್ಪಬೇಕೆಂದು ಒತ್ತಾಯ ಮಾಡಿ ನಾವು ಧರಣಿ ಮಾಡುತ್ತೇವೆ. ಬಹಳ ಪ್ರಾಮುಖ್ಯವಾಗಿ ಸದನದ ಸಮಿತಿಯನ್ನು ದಯಮಾಡಿ ಒಪ್ಪಿಕೊಳ್ಳಬೇಕು. ಸದನದ ಸಮಿತಿಯನ್ನು ಮಾಡುವುದರಲ್ಲಿ ತಪ್ಪೇನಾಗುತ್ತದೆ? ಈ ಸದನದ ಬಗ್ಗೆ ತಮಗೆ ನಂಬಿಕೆ ಇದೆ, ಸದನದ ಎಲ್ಲಾ ಪಕ್ಷದವರೂ ಸೇರುತ್ತಾರೆ, ಎಲ್ಲರೂ ಇರುತ್ತಾರೆ.

(ಮಾನ್ಯ ವಾಟಾಳ್‌ನಾಗರಾಜ್‌ರವರು ಧರಣಿ ಮಾಡಲು ಬಾವಿಗೆ ಬಂದರು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) : ಮಾನ್ಯ ಮಾಧುಸ್ವಾಮಿಯವರು, ವಾಟಾಳ್‌ನಾಗರಾಜ್‌ರವರು, ಶ್ರೀರಾಮರೆಡ್ಡಿಯುವರು, ಜಯುಪ್ರಕಾಶ್ ಹೆಗ್ಡೆಯುವರು, ರಾಜೇಂದ್ರನ್‌ರವರೆಲ್ಲರೂ ಹೇಳಿದ್ದಾರೆ. ನಿನ್ನೆ ಸಹ ತಾವು ಮಾತನಾಡತಕ್ಕ ಕಾಲದಲ್ಲಿ ಮಾನ್ಯ ಪ್ರಕಾಶ್‌ರವರು ಮಧ್ಯೆ ಪ್ರವೇಶ ಮಾಡಿ ಹೇಳಿದ್ದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರನ್ನು ಒಕ್ಕಲೆಬ್ಬಿಸುವುದಿಲ್ಲವೆಂದು.

ಶ್ರೀ ಧರ್ಮಸಿಂಗ್ : ಅದರ ಬಗ್ಗೆ ಈಗಾಗಲೇ ನಾವೆಲ್ಲರೂ ವಿಚಾರ ಮಾಡುತ್ತಿದ್ದೇವೆ. ತಾವು ಎಸ್.ಪಿ.ಯವರ ಬಗ್ಗೆ ಹೇಳಿದ್ದೀರಿ, ನಾವು ಯಾವ ದೃಷ್ಟಿಕೋನದಿಂದ ಹೇಳಿದೆ ಎಂದರೆ, ನಾವು ಎಷ್ಟು ಅಲರ್ಟ್ ಆಗಿದ್ದೇವೆ, ಅಂದರೆ ಖುದ್ದಾಗಿ ಮುಖ್ಯಮಂತ್ರಿನೇ ಕನ್ನಡ ಪ್ರಭ ನೋಡಿದ ಮೇಲೆ ಕೇಳಿ, ಹೇಳಿ ಮಾಡುವಂಥ ಮಾತನ್ನು ಹೇಳಿದ್ದೇವೆ. ಪಾಪ ಎಸ್.ಪಿ.ಯವರು ಆ ಕೆಲಸವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಸಹ ನಾವು ವಿಚಾರ ಮಾಡಿ ನೋಡುತ್ತೇವೆ. ಸದನದ ಸಮಿತಿಯ ಅವಶ್ಯಕತೆ ಇಲ್ಲ. ಏಕೆಂದರೆ ಪೋಲೀಸ್‌ನವರು ಈಗಾಗಲೇ ವಿಚಾರಣೆ ಮಾಡುತ್ತಿದ್ದಾರೆ. ಈಗಾಗಲೇ ಇಲಾಖೆಯ ಅಧಿಕಾರಿಗಳ ಸಭೆ ಕರೆಸಿ ಮಾತನಾಡಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಪೋಲೀಸ್‌ನವರಿಗೆ ಅನ್ಯಾಯವಾಗಿದೆ ಎಂದರೆ, ಪೋಲೀಸ್‌ನವರು ಸತ್ತಿರುವುದು ಏಕೆ ಎಂದು ಕೇಳಬಾರದೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸದನದ ಸಮಿತಿ ಮಾಡುವುದರಿಂದ ತಮಗೆ ತೊಂದರೆ ಏನು?

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸದನದ ಸಮಿತಿ ಮಾಡುವುದರಿಂದ ತನಿಖೆಗೆ ಸಹಾಯವಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಪೋಲೀಸ್‌ನವರು ಜನಗಳ ಮಧ್ಯೆದಲ್ಲಿ ಹೋಗುವ ಸ್ಥಿತಿ ವೆಂಕಟಮ್ಮನಹಳ್ಳಿಯಲ್ಲಿ ಇಲ್ಲ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಏನೇನಾಗಿದೆ ಏನೇನೂ ಆಗಿಲ್ಲ ಎಂಬುದನ್ನು ಹಿಂದಿನ ವರದಿಗಳನ್ನು ನೋಡಿದಾಗ ಇದರ ಅಗತ್ಯ ಇದೆಯೇ ಎಂಬ ಬಗ್ಗೆ ತಾವುಗಳೇ ಯೋಚನೆ ಮಾಡಬೇಕು, ನಾನು ಹೇಳುವುದಿಲ್ಲ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ನಾವು ಯೋಚನೆ ಮಾಡಿಯೇ ಹೇಳುತ್ತಿರುವುದು. ನಾವು ಅದನ್ನು ನೋಡಿಯೇ ಹೇಳುತ್ತಿರುವುದು.

ಶ್ರೀ ಜೆ.ಸಿ.ಮಾಧುಸ್ವಾಮಿ : ಇವತ್ತು ಪೊಲೀಸ್‌ನವರು ಪುನಃ ಅಲ್ಲಿಗೆ ಹೋಗುವ ಸ್ಥಿತಿಯಲ್ಲಿ ಇಲ್ಲ. ಅವರು ನಮ್ಮ ಜೊತೆ ಬರುವುದಿಲ್ಲ, ಹೆದರಿಕೊಂಡು ನಿಂತುಕೊಳ್ಳುತ್ತಾರೆ. ಆ ಬಾರ್ಡರ್ ದಾಟುವುದಿಲ್ಲ, ನಮ್ಮನ್ನು ಹೊಡೆದು ಹಾಕುತ್ತಾರೆಂದು ಹೇಳಿ ಹೆದರಿ ನಿಂತುಕೊಳ್ಳುತ್ತಾರೆ. ಆದ್ದರಿಂದ ಇಲ್ಲಿ ಒಂದು ಸದನದ ಸಮಿತಿ ಆಗಬೇಕಾದ ಅಗತ್ಯವಿದೆ, ಇವತ್ತು ಅಲ್ಲಿನ ಜನಗಳ ಮಧ್ಯೆ ಪೊಲೀಸ್‌ನವರು ಹೋಗಿಲ್ಲ. ಸಮಿತಿ ಹೋಗಿ ಒಂದು ವರದಿಯನ್ನು ಕೊಡಲು ತಮಗೇನು ಕಷ್ಟ?

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ಸದನದ ಸಮಿತಿ ಮಾಡುವುದರಿಂದ ತಮಗೇನು ತೊಂದರೆಯಾಗುತ್ತದೆ? ಅದನ್ನಾದರೂ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವೂ ಹೋಗಲಿಲ್ಲ, ಯಾರಾದರೂ ಹೋಗಿ ಅದನ್ನು ನೋಡಿಕೊಂಡು ಬರುತ್ತೇವೆಂದರೆ ಅದಕ್ಕೂ ಬೇಡ ಎಂದಿರಿ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ : ಇದನ್ನು ಮಾಡುವುದರಿಂದ ಆ ತನಿಖೆಗೇನೂ ತೊಂದರೆಯಾಗುವುದಿಲ್ಲ, ನಿಮಗೆ ಇನ್ನೂ ಇದರಿಂದ ಸಹಾಯವಾಗುತ್ತದೆ, ತಮಗೂ ಗೌರವ ಬರುತ್ತದೆ, ನಿಮಗೇ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಕೇವಲ ಪ್ರತಿ ಸಲ ಶಾಸನಸಭೆಯಲ್ಲಿ ಹೇಳುವುದಷ್ಟೇ ಆಗುತ್ತಿದೆ,

ಛೇರ್ಮನ್ : ಈಗ ಪ್ರಕಟಣೆಯನ್ನು ಹೇಳಲು ಇಚ್ಚಿಸುತ್ತಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಈಗಾಗಲೇ ಸಭೆಯನ್ನು ಮುಂದೂಡಲು ಸೂಚನೆ ಕಳುಹಿಸುತ್ತಿದ್ದೀರಿ, ನಾವು ಧರಣಿ ಮಾಡಬೇಕಾಗುತ್ತದಷ್ಟೆ.

ಶ್ರೀಪಿ.ಜಿ.ಆರ್.ಸಿಂಧ್ಯಾ : ಆ ರೀತಿ ಏನೂ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು adjourn ಮಾಡಿ ಎಂದು ಹೇಳುತ್ತಿದ್ದಾರೆ, ಪ್ರತಿ ಶಾಸನ ಸಭೆಯಲ್ಲೂ ಇದೇ ರೀತಿ adjourn ಆಗಬೇಕಾಗಿದ್ದರೆ ನಾವು ಕೇಳತಕ್ಕದ್ದೇನು? ನಾವೇನೋ ಕೇಳುವುದು ಅದಕ್ಕೆ ತಾವೇನೋ ಹೇಳುವುದು, ಬಿಡುವುದು, ಅವರು adjourn ಮಾಡಿ ಎಂದು ಸೂಚನೆ ಕೊಡುವುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಯಾರು ಹೇಳಿದ್ದು?

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಓಂಪ್ರಕಾಶ್‌ರವರು ಅಲ್ಲಿಗೆ ಹೋಗಿ ಸೂಚನೆ ಕೊಟ್ಟರು.

ಛೇರ್ಮನ್ : ಇಲ್ಲ. ಪ್ರಕಟಣೆ ಬಗ್ಗೆ ಅವರು ಕೊಟ್ಟಿದ್ದು.

ಶ್ರೀ ಜೆ.ಸಿ.ಮಾಧುಸ್ವಾಮಿ : ನನಗೆ ಅದು ಗೊತ್ತು. ತಾವು ಹೀಗೆ ಮಾಡುವುದಾದರೆ...

ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರದ ಪರವಾಗಿ ತೆಗೆದುಕೊಳ್ಳುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ಭರವಸೆ ಕೊಟ್ಟಮೇಲೆ ಸದನದ ಸಮಿತಿಯ ಅವಶ್ಯಕತೆ ಇಲ್ಲ, ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಈ ಕಾರ್ಯಕ್ರಮ ಮಾಡುವುದರಿಂದಲೇ ಅದು ಅಡೆತಡೆಯಾಗಬಾರದು ಎಂಬ ದೃಷ್ಟಿಯಿಂದ ತಾವು ದಯಮಾಡಿ ಈ ಪರಿಸ್ಥಿತಿ ಹಾಗೂ ಸೂಕ್ಷ್ಮತೆಯ ಹಿನ್ನೆಲೆಯೊಳಗೆ ಒಪ್ಪಿಕೊಳ್ಳಬೇಕು, ಮಾನ್ಯ ಮುಖ್ಯಮಂತ್ರಿಯವರು ಭರವಸೆ ಕೊಟ್ಟಿದ್ದಾರೆ, ಅದರ ಮೇಲೆ ತಾವುಗಳು ವಿಶ್ವಾಸದಿಂದ ಸಹಕರಿಸಬೇಕೆಂದು ಕೋರುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅದನ್ನು ಮಾಡುವುದರಿಂದ ತಮಗೆ ಆಗುವ ತೊಂದರೆ ಯೇನು?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನಕ್ಸಲ್ ಸಮಸ್ಯೆಗೆ ಮೂಲ ಕಾರಣವೇನೆಂದು ನೀವು ನೋಡಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಸಚಿವರು) : ನಾವೂ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಅನೇಕ ಸಂದರ್ಭದಲ್ಲಿ ಈ ವಿಚಾರವನ್ನೆಲ್ಲಾ ಪ್ರಸ್ತಾಪ ಮಾಡಿದ್ದೇವೆ. ಸದನದ ಸಮಿತಿ ಆಗಬೇಕೆಂದು ಒತ್ತಾಯವನ್ನು ಮಾಡಿದ್ದೇವೆ. ಪ್ರಶ್ನೆ ಇರತಕ್ಕಂಥದ್ದು what is the terms of reference ಯಾವುದರ ಬಗ್ಗೆ ನೀವು enquiry ಮಾಡುತ್ತೀರಾ ಎಂಬುದನ್ನು ದಯವಿಟ್ಟು ನೀವು ಹೇಳಿ. ಯಾವುದನ್ನು referr ಮಾಡುತ್ತೀರಾ?

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿದ್ದು ಮಾತನಾಡುತ್ತಿದ್ದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಎಲ್ಲವನ್ನೂ ತಾವು ಹೇಳುವುದಷ್ಟೆ. ಯಾವುದರ ಬಗ್ಗೆ? ಏನು?

(ಗೊಂದಲ)

Sri. J.C.Madhuswamy : The terms of reference is ಚಿಕ್ಕಮಗಳೂರಿನಲ್ಲಿ ಪೊಲೀಸ್‌ನವರು encounter ಮಾಡಿ..

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಪೊಲೀಸ್‌ನವರು ಪಾವಗಡದಲ್ಲಿ ಹಳ್ಳಿಗೆ ಹೋಗುವುದಿಲ್ಲವೆಂದು ಹೇಳುತ್ತೀರಾ ಇನ್ನೊಂದು ಕಡೆ ಪೊಲೀಸ್‌ನವರ ಮನೆಗೆ ಮುಖ್ಯಮಂತ್ರಿಯವರು, ಮಂತ್ರಿಗಳು ಹೋಗಲಿಲ್ಲವೆಂದು ಹೇಳುತ್ತೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ತಾವು ನನಗೆ ಮಾತನಾಡಲು ಬಿಡಿ. ತಾವು ಟರ್ಮ್ಸ್‌ನ್ನು ಕೇಳಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ತಾವು sufficient ಆಗಿ ಮಾತನಾಡಿದ್ದೀರಿ. ತಾವು ದಯಪಟ್ಟು ನಮ್ಮ ರೂಲಿಂಗ್ ಪಾರ್ಟಿಯಿಂದಲೂ ಕೇಳಿ.

Sri.J.C.Madhuswamy : Terms of reference ಹೇಳಿ ಎಂದು ತಾವು ಹೇಳಿದ್ದೀರಿ. ನಮಗೆ ಹೇಳಲು ಬಿಡಿ.

Sri.P.G.R.Shindhya : I am on my feet. I have not completed. ನಾನು ಏನು ಹೇಳುತ್ತೇನೆಂದರೆ, ಸದನದ ಸಮಿತಿಯನ್ನು ಮಾಡುವುದರಿಂದ ಏನಾದರೂ ಉಪಯೋಗವಾಗುತ್ತದೆ, ಇಂಥ Terms of reference specific ಆಗಿ ಈ ರೀತಿ ಒಂದು incident ಇದೆ ನಾವು ಮಾಡುತ್ತೇವೆ ಎಂಬ ಸಂದರ್ಭದಲ್ಲಿ ಸದನದ ಸಮಿತಿ ಮಾಡಿರತಕ್ಕ ಉದಾಹರಣೆಗಳು ಒಂದಲ್ಲ ಹತ್ತಾರು ಇರತಕ್ಕಂಥದ್ದು ತಮ್ಮ ಗಮನದಲ್ಲಿದೆ. ರೈತರ ಆತ್ಮಹತ್ಯೆ ಎಲ್ಲಾ ಕಡೆ ಆಗುತಿತ್ತು. ಆ ಸಂದರ್ಭದಲ್ಲಿ ನಾವೇನು ಹೇಳಿದ್ದೆವು, ಮಂಡ್ಯದ ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸದನದ ಸಮಿತಿಯನ್ನು ಮಾಡಿದೆವು, ಅವರು ಹೋಗಿ ಅದನ್ನೆಲ್ಲಾ ತಿಳಿದುಕೊಂಡು ಬಂದರು. ಇಲ್ಲಿ ಪ್ರಶ್ನೆ ಏನಿದೆ? ಶ್ರೀರಾಮರೆಡ್ಡಿಯವರು, ತಾವು, ವಾಟಾಳ್‌ನಾಗರಾಜ್‌ರವರು ನಕ್ಸಲೀಯರ ಸಮಸ್ಯೆಯ ಬಗ್ಗೆ ಬಹಳ ಜವಾಬ್ದಾರಿಯಿಂದ ಮಾತನಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ಇದು ಸೋಶಿಯೋ ಎಕನಾಮಿಕ್ ಪ್ರಾಬ್ಲಮ್, ಇದು ತಮಗೇ ಗೊತ್ತಿದೆ, ಲಾ ಅಂಡ್ ಆರ್ಡರನ್ನು ಮೇನ್‌ಟೇನ್ ಮಾಡಬೇಕೆಂದು ನಾವು ಹೇಳಿದರೆ, ಮುಖ್ಯಮಂತ್ರಿಗಳು, ಹೋಮ್ ಮಿನಿಸ್ಟರ್ ಮಂತ್ರಿಗಳು ಹೋಗಿ ಮಾಡಲು ಆಗುತ್ತದೆಯೆ? We have to maintain through our police force only. ಪೊಲೀಸ್ ಫೋರ್ಸ್‌ನ್ನು ಯಾವ ರೀತಿ ಇಟ್ಟುಕೊಳ್ಳಬೇಕು ಎನ್ನತಕ್ಕಂಥದ್ದು Have confidence in us. ಅವರೂ demoralise ಆಗದಿರುವ ಹಾಗೆ ಅವರಲ್ಲೂ bad elements ಇದೆ good elements ಇದೆ. ಅವರು demoralise ಆಗಬಾರದು. ಪಾಪ ಆ ಕುಟುಂಬದವರು ರೋಧನೆ ಮಾಡುತ್ತಿದ್ದಾರೆ, ನಾವು ಹೋಗಿದ್ದೇ ತಪ್ಪಾಯಿತು ಎಂದು ಬೀದರ್‌ನಿಂದ ಹಿಡಿದು ಪಾವಗಡದವರೆಗೆ ಇರತಕ್ಕಂಥ ಪ್ರಶ್ನೆ ಮಲೆನಾಡಿನಲ್ಲಿರತಕ್ಕ ಪ್ರಶ್ನೆ, ಇದೇ ನಮ್ಮ ಪೋಲೀಸರನ್ನು ವೀರಪ್ಪನ್ ಬದುಕಿದ್ದ ಸಂದರ್ಭದಲ್ಲಿ ಅಪಹಾಸ್ಯ ಮಾಡಿದೆವು, ವೀರಪ್ಪನ್‌ನನ್ನು ಇಬ್ಬರೂ ಪೊಲೀಸ್‌ನವರು ಸೇರಿಕೊಂಡು ಹೊಡೆದು ಹಾಕಿದಮೇಲೆ ಪೊಲೀಸ್‌ನವರನ್ನು ಅಪ್ರೀಶಿಯೇಟ್ ಮಾಡತಕ್ಕದ್ದು ಜನ ಇದ್ದೇವೆ? ನಾಲ್ಕೈದು ಜನರಿಗೆ ನಾವು ಅಪ್ರೀಶಿಯೆಟ್ ಮಾಡಿದ್ದೇವೆ. ನಿಮ್ಮದಲ್ಲ ನಾನು ಹೇಳುತ್ತಿರುವುದು ನಮ್ಮ ಸಮಾಜದ್ದು ನಾನು ಹೇಳುತ್ತಿದ್ದೇನೆ. ಆದ್ದರಿಂದ ನಾನು ವಿರೋಧ ಪಕ್ಷದವರಲ್ಲಿ ಮನವಿ ಮಾಡಿಕೊಳ್ಳತಕ್ಕದ್ದು Please have a confidence in the Chief Minister. ಅವರು ಸ್ಪೆಸಿಫಿಕ್ ಆಗಿ ಹೇಳಿದ್ದಾರೆ, Home department is such a delicate department, ಪ್ರೊಫೆಸರ್ ರಾಮಕೃಷ್ಣರವರು ಇದ್ದಾರೆ, ಅವರನ್ನು ವೈಚಾರಿಕವಾಗಿ ನಾವು ಒಪ್ಪದಿರಬಹುದು, ಆದರೆ ಅವರ integrity and commitment ನ್ನು ಯಾರೂ question ಮಾಡುವುದಕ್ಕಾಗುವುದಿಲ್ಲ. ಅನೇಕ ಜನ ಪ್ರೊಫೆಸರ್ಸ್‌ಗಳು ಇದ್ದಾರೆ. ಶ್ರೀರಾಮರೆಡ್ಡಿಯವರೇ, ತಾವೇ ಇದು democractic set up. They can have their own views. ಅವರ ಅಭಿಪ್ರಾಯಗಳನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದ್ದೀರಿ. ಆದ್ದರಿಂದ ಇದು ಬಹಳ ಡೆಲಿಕೇಟ್ ಆಗಿರತಕ್ಕ ವಿಚಾರ. ಲಾ ಅಂಡ್ ಆರ್ಡರ್‌ನ್ನು ಮೇನ್‌ಟೇನ್ ಮಾಡತಕ್ಕದ್ದು, senstitiveness ನಮಗೆ ಅರ್ಥವಾಗುತ್ತದೆ. Investors' point of view, development point of view, security of everyboy-

ಇವೆಲ್ಲಾ point of view ನಿಂದ ಇರಬಹುದು. ರಾಜ್ಯದಲ್ಲಿ ಕಾನೂನು ಕುಸಿದುಹೋಗಿದೆ, ಎಲ್ಲಿ ಕುಸಿದುಹೋಗಿದೆ?

ಶ್ರೀ ಜೆ.ಸಿ.ಮಾಧುಸ್ವಾಮಿ : ಇಲ್ಲಿ ಭಾಷಣ ಪ್ರಾರಂಭ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ?

(ಈ ಹಂತದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಗ್ರಾಮಪಂಚಾಯಿತಿ ಚುನಾವಣೆಯಾಯಿತು, ಸುದರ್ಶನ್ ರವರು ಆರ್.ಎಸ್.ಎಸ್.ನ chief ನವರು ಇಲ್ಲಿ ಬಂದು ಭಾಷಣ ಮಾಡಿದ್ದಾರೆ ಎನ್ನತಕ್ಕದ್ದು ಆಯಿತು, ದತ್ತಾತ್ರೇಯ ಪೀಠದ್ದು ಆಯಿತು, ಎಲ್ಲಾ ಉದಾಹರಣೆಗಳನ್ನು ಹೇಳಿ ಈ ಸರ್ಕಾರ ಬಂದು ಎಂಟು ತಿಂಗಳು ಆದಮೇಲೆ ಎಲ್ಲಾ ಆದವು ಎಂದು ಹೇಳಿದ ಮೇಲೆ ಏತಕ್ಕೆ ಸದನದ ಸಮಿತಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. I appreciate ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಮಾಧುಸ್ವಾಮಿ. ಅಟ್‌ಲೀಸ್ಟ್ ಇವರೆಲ್ಲಾ ಸಮಾಧಾನವಾಗಿ ಕುಳಿತು ನಮ್ಮ ಮಾತುಗಳನ್ನು ಕೇಳುತ್ತಿದ್ದಾರೆ. ನಮ್ಮ ಬಿ.ಜೆ.ಪಿ.ಮಿತ್ರರು ನಿನ್ನೆಯಿಂದ ಅಷ್ಟೆಲ್ಲಾ ಮಾತನಾಡಿ, ಸರ್ಕಾರದ ಉತ್ತರ ಕೇಳುವಂತಹ ಸವಾಧಾನವೂ ಸಹ ಅವರಲ್ಲಿ ಇಲ್ಲವಲ್ಲಾ. Democracy ನಲ್ಲಿ ಉತ್ತರ ಕೇಳುವ ಸಮಾಧಾನವನ್ನಾದರೂ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಉತ್ತರ ಕೇಳುವುದಕ್ಕೂ ಸಹಿತ ಅವರು ನಾವು ಹೇಳಿದಂತೆಯೇ ಆಗಬೇಕು ಎನ್ನುತ್ತಾರೆ. ಅದು ಹೇಗೆ ಆಗುತ್ತದೆ? ....

ಶ್ರೀ ಜೆ.ಸಿ.ಮಾಧುಸ್ವಾಮಿ : .... ಸಂಜೆಯವರೆಗೂ ಮಾತನಾಡಿ ನಂತರ House adjourn ಮಾಡಿಸಬೇಕು ಎಂದು ತೀರ್ಮಾನ ಮಾಡಿಕೊಂಡು ನೀವು ಮಾತನಾಡುತ್ತಿರುವಂತೆ ಕಾಣುತ್ತದೆ ...

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : .... ಸುದರ್ಶನ್ ಸರ್ಕಾರಕ್ಕೆ ಸರ್ಟಿಫಿಕೇಟ್ ಕೊಟ್ಟು ಬಿಟ್ಟರೆ ಸಾಕೇ? ಬೇರೆ ಯಾರದ್ದೂ ಬೇಕಾಗಿಲ್ಲವೇ? ಸುದರ್ಶನ್ ಹಿನ್ನೆಲೆ ನಿಮಗೆ ಗೊತ್ತಿಲ್ಲ ಪಾಪ ! ಅದೇ ಇಲ್ಲಿ ಬಂದಿರುವ ಸಮಸ್ಯೆಯಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ನಾನೊಂದು ಉದಾಹರಣೆ ಕೊಟ್ಟೆ ಅಷ್ಟೇ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಸರ್ಕಾರಕ್ಕೆ ಸ್ಪಷ್ಟವಾಗಿ ಕೇಳುತ್ತಿದ್ದೇವೆ. ವೆಂಕಟಮ್ಮನ ಹಳ್ಳಿಯಲ್ಲಿ ಫೈರಿಂಗ್ ಆದ ಹಿನ್ನೆಲೆಯಲ್ಲಿ, ಆ ಎರಡು ದಿವಸದಲ್ಲಿ ಇದ್ದಂತಹ ಪರಿಸ್ಥಿತಿ ಏನು? ಪೊಲೀಸ್‌ನವರನ್ನು ಸಾರಾಸಗಟಾಗಿ ಹೊಡೆಯುತ್ತಿದ್ದರೂ ಕೂಡ ಜನ ಆಚೆಗೆ ಬರಲಾರದಂತಹ ಸ್ಥಿತಿ ಏಕೆ ನಿರ್ಮಾಣವಾಗಿತ್ತು? ವೆಂಕಟಮ್ಮನಹಳ್ಳಿಯಲ್ಲಿ ಅಥವಾ ರಾಜ್ಯದ ಆಂಧ್ರ ಪ್ರದೇಶದ ಗಡಿಯಲ್ಲಿ ಮುಂದೆ ನಕ್ಸಲೈಟ್ ಹಾವಳಿ ಕಡಿಮೆ ಮಾಡಲಿಕ್ಕೆ ಏನಾದರೂ ಕ್ರಮಗಳನ್ನು ಜರುಗಿಸಲಿಕ್ಕೆ ಆಗುತ್ತದೆಯೇ ಎಂಬ ಬಗ್ಗೆ ಮಾಹಿತಿಗಳನ್ನು ಸಂಗ್ರಹಣೆ ಮಾಡಲಿಕ್ಕೆ ಮತ್ತು ಆ ಜನಗಳು ನೆಮ್ಮದಿಯಿಂದ ಜೀವನ ಮಾಡಲಿಕ್ಕೆ ಅನುಕೂಲವಾಗುವಂತಹ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಲಿಕ್ಕೆ ಒಂದು ಸಮಿತಿ ಮಾಡಿ ಎಂದರೆ, ಅದಕ್ಕೆ ತಾವು ಆಗುವುದಿಲ್ಲ ಎಂದರೆ ನಾವೇನು ಉತ್ತರ ಹೇಳುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ, ಸಚಿವರು) : ಮಾನ್ಯ ಸಭಾಧ್ಯಕ್ಷರೆ, ನಾವು ಬಹಳ ಮುಖ್ಯವಾಗಿ ಗಮನಿಸಬೇಕಾಗಿರತಕ್ಕಂಥದ್ದು, ಒಂದು ಸರ್ಕಾರ ಆಡಳಿತವನ್ನು ನಡೆಸುತ್ತದೆ. ಆಡಳಿತ

ನಡೆಸುವಂತಹ ಸಂದರ್ಭಗಳಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳತಕ್ಕಂಥದ್ದು ಅದರ ಆದ್ಯ ಕರ್ತವ್ಯವಾಗುತ್ತದೆ. ಇದರ ಬಗ್ಗೆ ಹೌಸ್ ಕಮಿಟಿಯೊಂದನ್ನು ರಚಿಸಬೇಕೆಂದರೆ, ಅದಕ್ಕೆ ಯಾವ ತರಹದ terms of reference ಅನ್ನು ಕೊಡುತ್ತೀರಿ? ಅದನ್ನು ನಾವು ನೋಡಬೇಕಾಗುತ್ತದೆಯಲ್ಲವೇ? ಹೌಸ್ ಕಮಿಟಿ ಮಾಡಬೇಕೆಂದಿದ್ದರೆ, ಅದಕ್ಕೆ ನಿರ್ದಿಷ್ಟವಾದಂತಹ ಪ್ರಕರಣವನ್ನು ವಹಿಸಬೇಕಾಗುತ್ತದೆ. ಇದಕ್ಕೆ ಬಹು ಮುಖ್ಯವಾದಂತಹ ಅನೇಕ ಸಮಸ್ಯೆಗಳಿವೆ, ಅನೇಕ ಆಯಾಮಗಳಿವೆ. ಇದರ ಬಗ್ಗೆ ನೀವು ಅನೇಕ ಸಲಹೆಗಳನ್ನು ಕೊಟ್ಟಿದ್ದೀರಿ. ಇವತ್ತು ಪ್ರಶ್ನೋತ್ತರ ವೇಳೆಯಲ್ಲಿ, ಹಿಂದೆ ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡುವಾಗ ನೀವು ಹೇಳಿದ್ದೀರಿ. ಈ ಎಲ್ಲಾ ಹಿನ್ನೆಲೆಗಳ ಸಮಗ್ರವಾದಂತಹ ಚಿತ್ರಣವನ್ನು ಇಟ್ಟುಕೊಂಡಾಗ, ಹೌಸ್ ಕಮಿಟಿಗೆ ಕೊಡತಕ್ಕಂಥದ್ದು ಸರಿಯಲ್ಲ. ನಿರ್ಣಯ ಇದಕ್ಕೇ ಬದ್ಧವಾಗಿರುತ್ತದೆ ಎಂದಲ್ಲ. ಯಾವುದಾದರೂ ಒಂದು ನಿಖರವಾದ ಪ್ರಕರಣಕ್ಕಾಗಿದ್ದರೆ ಹೌಸ್ ಕಮಿಟಿ ರಚಿಸಿ, ಅದು ಅದರ ಬಗ್ಗೆ ತನಿಖೆ ಮಾಡಿ ವರದಿ ಕೊಟ್ಟಿರತಕ್ಕಂಥದ್ದು ಇರಬಹುದು. ಆದರೆ ವೆಂಕಟಮ್ಮನಹಳ್ಳಿಯಲ್ಲಿ ಆಗಿರತಕ್ಕಂಥ .....

ಶ್ರೀ ಕೆ.ಆರ್.ರಮೇಶ್ ಕುಮಾರ್ : ಪ್ರಕಾಶ್ ಸಾಹೇಬರೇ, ಅಷ್ಟೇ ಅಲ್ಲ. ವೆಂಕಟಮ್ಮನಹಳ್ಳಿ ಘಟನೆಯಾಗಿ ಸ್ವಲ್ಪ ದಿವಸ ಕಳೆದ ಮೇಲೆ ಕೆಲವು organisations ನವರು ಇದನ್ನು ನಾವು ಮಾಡಿದ್ದೇವೆ ಎಂದು claim ಮಾಡಿದ್ದಾರೆ. ಅವರು ನಾಳೆ ನಿಮ್ಮ House Committee ಮುಂದೆ appear ಆಗತಕ್ಕಂಥವರಲ್ಲ ಮತ್ತು depose ಮಾಡತಕ್ಕಂಥವರೂ ಸಹ ಅಲ್ಲ. ಆಗ ನೀವು ಏನು ಮಾಡುತ್ತೀರಿ? ನಕ್ಸಲೈಟ್‌ಗೆ can you summon them to appear before the House Committee? I am not opposed to House Committee.

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಏನು ಮಾಡಲಿಕ್ಕಾಗದಿದ್ದರೂ ಅಂತಹ ಭಾಗದಲ್ಲಿ ಸಾರ್ವಜನಿಕರನ್ನೇನಾದರೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆಯೇ ಎಂದು ವಿಶ್ಲೇಷಣೆ ಮಾಡಲಿಕ್ಕೆ ನಾವು ಹೋಗಬೇಕಾಗುತ್ತದೆ. When entire Police force was under shoot ಏತಕ್ಕೆ ಜನ ಎದ್ದು ಆಚೆಗೆ ಬರಲಿಲ್ಲ ಎಂಬುದನ್ನು ವಿಚಾರ ಮಾಡಲಿಕ್ಕಾಗಿ ನಾವು ಹೌಸ್ ಕಮಿಟಿ ಮಾಡಿ ಎಂದು ಕೇಳುತ್ತಿದ್ದೇವೆ. What prevented the public from coming out. ಏತಕ್ಕೆ ಆ ಜನ ಆಚೆಗೆ ಬರಲಿಲ್ಲ. ಅವರ depose ತೆಗೆದುಕೊಂಡು ನಮಗೇನೂ ಆಗಬೇಕಾಗಿಲ್ಲ. ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : .... ಅವರು ನಮ್ಮ ಮುಂದೆ depose ಮಾಡಬೇಕು ಎನ್ನತಕ್ಕಂಥದ್ದು ಏನೂ ಇಲ್ಲ. ನಾವು ಅವರನ್ನು depose ಮಾಡಿ ಎಂದೂ ಕೇಳುವುದಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ..... ಹಾಗೆಯೇ ತೀರ್ಮಾನಕ್ಕೆ ಬರುತ್ತೀರಾ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ....ಪೊಲೀಸಿನವರ ಸ್ಥಿತಿಯೇ ಈ ರೀತಿಯಾದರೆ ನಮ್ಮಗಳ ಸ್ಥಿತಿಯೇನು ಎಂದು ಇವತ್ತು ಜನ ಕೇಳುತ್ತಿದ್ದಾರೆ. ಅದಕ್ಕೆ ನಾವು ಇವತ್ತು ಒಂದು ಉತ್ತರ ಹೇಳಬೇಕಾಗಿದೆ ...

Sri G.V. Sriram reddy : .....anonymous letter ಬರೆದಿರುವವರಿಗೆಲ್ಲಾ ಮತ್ತು ಅಡ್ರೆಸ್ ಇಲ್ಲದಿರುವವರಿಗೆಲ್ಲಾ depose ಮಾಡಿ ಎಂದು ಕರೆಯಲಿಕ್ಕಾಗುತ್ತದೆಯೇ?

ಶ್ರೀ ಕೆ.ಆರ್.ರಮೇಶ್ ಕುಮಾರ್ : .... ಅಡ್ರೆಸ್ ಇಲ್ಲದಿರುವುದರಿಂದಲೇ ಅವರು ಇವತ್ತು ಇಷ್ಟೆಲ್ಲಾ ಮಾಡಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಯಾರು?

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಶ್ರೀರಾಮರೆಡ್ಡಿಯವರು ಅಡ್ರೆಸ್ ಇಲ್ಲದಿರುವವರೆಲ್ಲಾ ಬಂದು depose ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. That is your party line? I am not prepared to accept it .....

Sri J.C.Madhuswamy : Whether you accept it not ,We will demand to the Chief Minister.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು claim ಮಾಡುತ್ತಿದ್ದಾರೆ ಅನ್ನತಕ್ಕಂಥ ......

Sri K.R.Ramesh Kumar : Can you summon them? Can you call them before your Committee? ......

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ಒಂದೊಂದು ಸಲ ಒಂದೊಂದು ನಿಲುವು ತೆಗೆದುಕೊಂಡು ಬಿಟ್ಟರೆ ಹೇಗೆ ಸಾರ್? ....

ಶ್ರೀ ಎಂ.ಪಿ.ಪ್ರಕಾಶ್ : ಈಗ ಪ್ರಶ್ನೆ ಅದಲ್ಲ .....

ಶ್ರೀ ಜೆ.ಸಿ.ಮಾಧುಸ್ವಾಮಿ : ... ವೆಂಕಟಮ್ಮನಹಳ್ಳಿಯಲ್ಲಿ ನಡೆದಿರುವಂತಹ ಘಟನೆ ಪೂರ್ವ ನಿಯೋಜಿತವೋ? ಅಥವಾ ಆಕಸ್ಮಿಕವೋ ಎಂಬುದು ನಮಗೆ ಗೊತ್ತಾಗಬೇಕು. ವೆಂಕಟಮ್ಮನ ಹಳ್ಳಿಯ ಜನ ಇಷ್ಟೆಲ್ಲಾ ಆದರೂ ಸಹ ಈಚೆಗೆ ಏಕೆ ಬರಲಿಲ್ಲ ಎಂಬುದು ನಮಗೆ ಗೊತ್ತಾಗಬೇಕು.

Sri M.P.Prakash : I call this as the tyranny of the minority. ತಾವೊಂದು ನಾಲ್ಕು ಜನ ' ಇದು ಆಗಿಯೇ ತೀರಬೇಕು ' ಎಂದು ಒತ್ತಾಯ ಮಾಡುವುದಾಗಿದ್ದರೆ, ... ಸಂಸದೀಯ ನಡವಳಿಕೆಗಳಲ್ಲಿ ತಾವೊಂದು ಅಭಿಪ್ರಾಯವನ್ನು ವ್ಯಕ್ತ ಮಾಡುತ್ತೀರಿ. ಆ ಅಭಿಪ್ರಾಯವನ್ನು ಸರ್ಕಾರದವರು ಒಪ್ಪಲಿಲ್ಲ ಎಂದಾಗ, ಅದರ ಮನವೊಲಿಸುವಂತಹ ಪ್ರಯತ್ನವನ್ನೂ ಸಹ ತಾವು ಮಾಡಿದ್ದೀರಿ. ಆದರೆ ಇದರಲ್ಲಿ ಸರ್ಕಾರ ನಿರ್ವಹಿಸಬೇಕಾದಂತಹ ಕರ್ತವ್ಯಗಳಲ್ಲಿ, ತಾವು ಇದರ ಬಗ್ಗೆ ಸದನ ಸಮಿತಿ ಮಾಡಿ ಎಂದು ಒತ್ತಡ ತರತಕ್ಕಂಥದ್ದು ಏನಿದೆ, ಇದು ತೀರಾ ಒತ್ತಡ ಆಗುತ್ತದೆ. It is a tyranny of the minority.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ ಹಾಗೂ ಜೆ.ಡಿ.(ಯು) ಪಕ್ಷದ ಸದಸ್ಯರು ಪಕ್ಷದ ಶಾಸಕಾಂಗದ ನಾಯಕರಾದ ಮಾನ್ಯ ಮಾಧುಸ್ವಾಮಿಯವರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾದರು)

ತಾವು ಹೇಳಬೇಕಾದಂತಹ ಅಭಿಪ್ರಾಯವನ್ನು ಸರ್ಕಾರಕ್ಕೆ ಹೇಳಿದ್ದೀರಿ. ಆದರೆ ಅದನ್ನು ಸರ್ಕಾರ ಒಪ್ಪಿಯೇ ತೀರಬೇಕು ಎನ್ನತಕ್ಕಂಥದ್ದು ಏನೂ ಇಲ್ಲ. ಹೇಳಿದ್ದೆಲ್ಲವನ್ನೂ ಕೂಡ ಒಪ್ಪುವುದಾದರೆ, ಸರ್ಕಾರ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. It is a tyranny. You can't impose a minority opinion. It cannot be imposed upon the government. ಇದು ಕೇವಲ ಒಂದು ಅಭಿಪ್ರಾಯ. ಅಭಿಪ್ರಾಯ ಭೇದ ಇಲ್ಲಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ಮಾತನಾಡುತ್ತಿದ್ದರು) ಅದಲ್ಲ ಇದು. You cannot do that.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನಕ್ಸಲೈಟ್ ವಿಷಯದಲ್ಲಿ ಬಹಳ ಬೆಳಕು ಚೆಲ್ಲಿದರು. ....

ವಾಟಾಳ್‌ರವರೇ, ನೀವಲ್ಲ ಪರ್ಮಿಷನ್ ಕೊಡುವವರು. ನಾನು ನಿಮ್ಮ ಪರ್ಮಿಷನ್ ಕೇಳಬೇಕಾಗಿಲ್ಲ. ನಾನು ಅಧ್ಯಕ್ಷರ ಪರ್ಮಿಷನ್ ಕೇಳಿ ಮಾತನಾಡುತ್ತಿದ್ದೇನೆ. ....

(ಗೊಂದಲ)

ಛೇರ್ಮನ್ : ಇಲ್ಲಿಗೆ ಚರ್ಚೆ ಸಾಕು. ನಾನೀಗ ಘೋಷಣೆಯೊಂದನ್ನು ಮಾಡುತ್ತಿದ್ದೇನೆ.

(ಗೊಂದಲ)

ಛೇರ್ಮನ್ : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ : .... ನನ್ನ ಅನಿಸಿಕೆಗಳೂ ಸಹ ಇವೆ. ಅದನ್ನು ನಾನು ಹೇಳಬೇಕಾಗುತ್ತದೆ ......

(ಗೊಂದಲ)

ಶ್ರೀ ಕೆ.ಶ್ರೀನಿವಾಸಗೌಡ : ..... ನಾಳೆ ನಕ್ಸಲೈಟ್ ಮೇಲೆ ಕ್ರಮ ಜರುಗಿಸಲು ಆಗುವುದಿಲ್ಲ, ಕಷ್ಟವಾಗುತ್ತದೆ. ಪೋಲೀಸರಿಗೂ ಸಹ ಕಷ್ಟವಾಗುತ್ತದೆ ....

(ಗೊಂದಲ)

ಛೇರ್ಮನ್ : ಮಾನ್ಯ ಪ್ರತಿ ಪಕ್ಷದ ನಾಯಕರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಹೇಳುವುದೇನಾದರೂ ಇದ್ದರೆ ಹೇಳಬೇಕು.

(ಧರಣಿ ನಿರತ ಸದಸ್ಯರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಜೆ.ಸಿ.ಮಾಧುಸ್ವಾಮಿ : ಸರ್ಕಾರದಿಂದ ಉತ್ತರ ಬಂದಿಲ್ಲ, ಮಾನ್ಯ ಮುಖ್ಯ ಮಂತ್ರಿಯವರಿಂದ ತಾವು ಉತ್ತರ ಕೊಡಿಸಬೇಕು.

ಛೇರ್ಮನ್ : ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಅವರು ಉತ್ತರ ಕೊಡಲಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ : ಉತ್ತರ ಏನೂ ಇಲ್ಲ.

(ಗೊಂದಲ)

ಛೇರ್ಮನ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಎಲ್ಲಾ ಹಿರಿಯ ಸದಸ್ಯರು ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಸಮಗ್ರವಾದಂತಹ ಉತ್ತರವನ್ನು ಕೊಟ್ಟಿದ್ದೇನೆ. ಇದು ಸರ್ಕಾರಕ್ಕೆ ಬಿಡಿ, ಇದು ಬಹಳ ಸೂಕ್ಷ್ಮವಾದುದು. ಬೇರೆ ವಿಚಾರದಲ್ಲಿ ಸದನ ಸಮಿತಿ ಮಾಡಲಿಕ್ಕೆ ನಾನು ತಯಾರಾಗುತ್ತಿದ್ದೆ. It is the inter state matter. ಇವತ್ತು ಆಂಧ್ರ

ಬಾರ್ಡರ್‌ನಲ್ಲಿ ಇರತಕ್ಕಂಥ, ನಮ್ಮಲ್ಲಿ ಇರತಕ್ಕಂಥ, ಅಲ್ಲಿ ಬರತಕ್ಕಂಥ .... ಕೇಳಿ. ಶ್ರೀರಾಮರೆಡ್ಡಿಯವರೇ ಇದಕ್ಕೆ ಸರಿ ಹೋಗುವುದಿಲ್ಲ. ಏಕೆಂದರೆ ನಕ್ಸಲೈಟ್ activities ಕೇವಲ it is not confined to Karnataka State. ಪಾವಗಡದ ವೆಂಕಟಮ್ಮನ ಹಳ್ಳಿಯಲ್ಲೇನು ಆಗಿದೆ, ಆಂಧ್ರದಿಂದ ಬಂದವರು ಅಲ್ಲಿ ಆ ರೀತಿಯಾಗಿ ಹತ್ಯೆ ಮಾಡಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ನಾನು ಹೇಳುವುದೇನೆಂದರೆ, It is a very important and sensitive issue. ಆದ್ದರಿಂದ ಈ ವಿಚಾರವನ್ನು ನಮಗೆ ಬಿಡಿ. ನಮ್ಮ ಮೇಲೆ ವಿಶ್ವಾಸ ಇಡಿ. ನಾವು ಸರಿಯಾದ ರೀತಿಯಲ್ಲಿ ......

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಒಂದು ವಿಷಯವನ್ನು ಹೇಳಲು ಮರೆತೆ. ಆ ಘಟನೆಯಾದ ಮೇಲೆ ನಮ್ಮ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳು ಆಂಧ್ರ ಪ್ರದೇಶಕ್ಕೆ ಹೋಗಿದ್ದರು. ಅಲ್ಲಿನ ಮುಖ್ಯಮಂತ್ರಿಗಳನ್ನೂ ಸಹ ಭೇಟಿಯಾಗಿ ಬಂದರು. ನಾನೂ ಸಹ ಅಲ್ಲಿನ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿದ್ದೇನೆ. ಮಾನ್ಯ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಎಂದರೆ, ನೀವು ಆ ಭಾಗದಲ್ಲಿ ಹೋದರೆ ಪ್ರತಿಕ್ರಿಯೆ ಬೇರೆ ರೀತಿಯಲ್ಲಿ ಬರುತ್ತದೆ, ಇದನ್ನು ಸಂಯಮದಿಂದ ನಾವು ಮತ್ತು ನೀವು ಕುಳಿತುಕೊಂಡು ಬಗೆಹರಿಸೋಣ.

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ನಾನು ಹೇಳುತ್ತೇನೆ, ಕೇಳಿ. ಬೇಕಾದರೆ ನಿಮ್ಮೆಲ್ಲರನ್ನೂ ಕೂಡ ಕರೆದುಕೊಂಡು ಹೋಗುತ್ತೇನೆ, ಆಂಧ್ರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ರಾಜಶೇಖರ ರೆಡ್ಡಿಯವರ ಜೊತೆಗೆ ಭೇಟಿ ಮಾಡಿ ಮಾತನಾಡೋಣ. ಇದು ಸೂಕ್ಷ್ಮವಾದ ವಿಚಾರವಾಗಿದೆ. ಇದನ್ನು ನೀವು ನನಗೆ ಬಿಡಿ. ನಾನು ಇದರ ಬಗ್ಗೆ ತನಿಖೆ ಮಾಡಿ ತಮಗೆ ತಿಳಿಸುತ್ತೇನೆ.

(ಧರಣಿ ನಿರತರು ಸದನದ ಬಾವಿಯಿಂದ ಮಾತನಾಡುತ್ತಿದ್ದರು)

ಛೇರ್‌ಮನ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಚರ್ಚೆ ಮುಗಿಯಿತು.

ಪ್ರಕಟಣೆ

ಇಂದು ಸಂಜೆ 6.00 ಗಂಟೆಗೆ ಕೋರಮಂಗಲದ ಪಿವಿಆರ್ ಫೋರಂನಲ್ಲಿ ಬ್ಲ್ಯಾಕ್ ಚಿತ್ರವನ್ನು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರ ವೀಕ್ಷಣೆಗಾಗಿ ಏರ್ಪಡಿಸಲಾಗಿದೆ. ಎಂದು ಕಾಮನ್‌ವೆಲ್ತ್ ಸಂಸದೀಯ ಸಂಘ ಕರ್ನಾಟಕ ಶಾಖೆ ವತಿಯಿಂದ ಘೋಷಣೆಯಾಗಿದೆ.

ಛೇರ್ಮನ್ : ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ. (ಸದನವು ಸಂಜೆ 6.00 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ : 16ನೇ ಮಾರ್ಚ್ 2005 ರಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ– I

1536(2107) ಶ್ರೀ ಅಂಗಾರ.ಎಸ್(ಸುಳ್ಯ) ಮಾನ್ಯ ಪೌರಾಡಳಿತ ಮತ್ತು ಕೆ.ಯು.ಐ.ಡಿ.ಎಫ್.ಸಿ.ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸುಳ್ಯ ನಗರ ಪಂಚಾಯತ್‌ಗೆ ಒಳಚರಂಡಿ ಯೋಜನೆ ಮಂಜೂರಾಗಿದ್ದು, ಶುದ್ಧೀಕರಣ ಘಟಕಕ್ಕೆ, ಮತ್ತು ತ್ಯಾಜ್ಯ ವಸ್ತುಗಳ ವಿಲೇವಾರಿ ಮಾಡಲು ಸ್ಥಳವು ನಿಗದಿಯಾಗದೆ ಕಾಮಗಾರಿ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;